# ಕುವೆಂಪು ವಿಶ್ವವಿದ್ಯಾಲಯ

ದಿನಾಂಕ:31-10-2025 ರಂದು ಶುಕ್ರವಾರ ಪೂರ್ವಾಹ್ನ ಶತಮಾನೋತ್ಸವ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಂಗಣ ಇಲ್ಲಿ ನಡೆದ "176ನೇ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆ"ಯ ನಡಾವಳಿಗಳು.

ಹಾಜರಾದ ಸದಸ್ಯರು:

| | | |
|---|---|---|
| 1. | ಪ್ರೊ. ಶರತ್ ಅನಂತಮೂರ್ತಿ, ಮಾನ್ಯ ಕುಲಪತಿಗಳು | ಅಧ್ಯಕ್ಷರು |
| 2. | ಪ್ರೊ. ಆರ್. ತಿಮ್ಮರಾಯಪ್ಪ, ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 3. | ಡಾ. ಕೇಶವ ಹೆಚ್, ಜಂಟಿ ನಿರ್ದೇಶಕರು | ಸದಸ್ಯರು |
| 4. | ಡಾ. ಸಂಧ್ಯಾ ಕಾವೇರಿ, ಪ್ರಾಂಶುಪಾಲರು | ಸದಸ್ಯರು |
| 5. | ಶ್ರೀ ಉಲ್ಲಾಸ್ ಇ.ಜಿ, ಪ್ರಾಂಶುಪಾಲರು | ಸದಸ್ಯರು |
| 6. | ಡಾ. ಚಿದಾನಂದ ಎಸ್.ಕೆ, ಪ್ರಾಂಶುಪಾಲರು | ಸದಸ್ಯರು |
| 7. | ಡಾ. ಎಂ. ವೆಂಕಟೇಶ್, ಪ್ರಾಂಶುಪಾಲರು | ಸದಸ್ಯರು |
| 8. | ಡಾ. ಪ್ರಭಾಕರ್ ಎಸ್. ಮಂಟೂರೆ, ಪ್ರಾಂಶುಪಾಲರು | ಸದಸ್ಯರು |
| 9. | ಡಾ.ಬಿ.ಜಿ. ಚನ್ನಪ್ಪ ಪ್ರಾಂಶುಪಾಲರು | ಸದಸ್ಯರು |
| 10. | ಶ್ರೀ ರಾಜಣ್ಣ ಕೆ. ಪ್ರಾಂಶುಪಾಲರು | ಸದಸ್ಯರು |
| 11. | ಡಾ. ರಾಕೇಶ್ ಎಸ್.ಪಿ. ಪ್ರಾಂಶುಪಾಲರು | ಸದಸ್ಯರು |
| 12. | ಡಾ. ಶಿವಕುಮಾರ್ ಜಿ.ಎಸ್, ಪ್ರಾಂಶುಪಾಲರು | ಸದಸ್ಯರು |
| 13. | ಡಾ. ಜಿ.ಎಂ. ಗಣೇಶ್, ಪ್ರಾಂಶುಪಾಲರು | ಸದಸ್ಯರು |
| 14. | ಪ್ರೊ. ಅಶೋಕ್ ಆರ್. ಲಮಾಣಿ. ಪ್ರಾಧ್ಯಾಪಕರು | ಸದಸ್ಯರು |
| 15. | ಪ್ರೊ. ನಮ್ರತಾ ಎಂ. ಪ್ರಾಧ್ಯಾಪಕರು | ಸದಸ್ಯರು |
| 16. | ಪ್ರೊ. ವರ್ಗೀಸ್ ಪಿ.ಎ. ಪ್ರಾಧ್ಯಾಪಕರು | ಸದಸ್ಯರು |
| 17. | ಪ್ರೊ. ವೆಂಕಟೇಶ್ ಎಸ್. ಪ್ರಾಧ್ಯಾಪಕರು | ಸದಸ್ಯರು |
| 18. | ಪ್ರೊ. ಆರ್. ಹಿರೇಮಣಿನಾಯ್ಕ್, ಡೀನರು, ವಾಣಿಜ್ಯ ನಿಕಾಯ | ಸದಸ್ಯರು |
| 19. | ಪ್ರೊ. ಚಂದ್ರಶೇಖರ್ ಎಸ್, ಡೀನರು, ಕಲಾ ನಿಕಾಯ | ಸದಸ್ಯರು |
| 20. | ಪ್ರೊ. ವೈ.ಎಲ್. ರಾಮಚಂದ್ರ, ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ | ಸದಸ್ಯರು |
| 21. | ಪ್ರೊ. ಗಜಾನನ ಪ್ರಭು ಬಿ., ಡೀನರು, ಶಿಕ್ಷಣ ನಿಕಾಯ | ಸದಸ್ಯರು |
| 22. | ಡಾ. ಆರ್.ಹೆಚ್. ವಾಲ್ಮೀಕಿ, ಗ್ರಂಥಪಾಲಕರು, (ಪ್ರಭಾರ) | ಸದಸ್ಯರು |
| 23. | ಡಾ. ಜಿ. ಪ್ರಶಾಂತ ನಾಯಕ, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶಕರು | ಸದಸ್ಯರು |
| 24. | ಪ್ರೊ. ಯೋಗೇಂದ್ರ ಕೆ., ನಿರ್ದೇಶಕರು ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ | ಸದಸ್ಯರು |
| 25. | ಪ್ರೊ. ಗಜಾನನ ಪ್ರಭು ಬಿ, ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್, | ಸದಸ್ಯರು |
| 26. | ಡಾ. ಎನ್.ಡಿ. ವಿರೂಪಾಕ್ಷ, ನಿರ್ದೇಶಕರು ದೈಹಿಕ ಶಿಕ್ಷಣ | ಸದಸ್ಯರು |

ಗೈರುಹಾಜರಾದ ಸದಸ್ಯರು:

| | | |
|---|---|---|
| 1. | ಶ್ರೀ ಹೆಚ್.ಡಿ. ತಮ್ಮಯ್ಯ, ಶಾಸಕರು, ಚಿಕ್ಕಮಗಳೂರು ಕ್ಷೇತ್ರ | ಸದಸ್ಯರು |
| 2. | ಶ್ರೀ ಬಿ.ಕೆ. ಸಂಗಮೇಶ್ವರ, ಶಾಸಕರು, ಭದ್ರಾವತಿ | ಸದಸ್ಯರು |
| 3. | ಶ್ರೀ ಡಿ.ಎಸ್. ಅರುಣ್, ಶಾಸಕರು, ಕರ್ನಾಟಕ ವಿಧಾನ ಪರಿಷತ್ | ಸದಸ್ಯರು |
| 4. | ಶ್ರೀ ಸೂರಜ್ ರೇವಣ್ಣ, ಶಾಸಕರು, ಕರ್ನಾಟಕ ವಿಧಾನ ಪರಿಷತ್ | ಸದಸ್ಯರು |
| 5. | ನಿರ್ದೇಶಕರು; ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577

6. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು. ಸದಸ್ಯರು
7. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು. ಸದಸ್ಯರು
8. ಆಯುಕ್ತರು, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು. ಸದಸ್ಯರು

<u>ಪೂರ್ವಾನುಮತಿಯೊಂದಿಗೆ ಗೈರು ಹಾಜರಾದ ಸದಸ್ಯರು:</u>

1. ಶ್ರೀ ಎ.ಎಲ್. ಮಂಜುನಾಥ್, ಕೆ.ಎ.ಎಸ್., ಕುಲಸಚಿವರು ಸದಸ್ಯ ಕಾರ್ಯದರ್ಶಿಗಳು
2. ಪ್ರೊ. ಜಿ.ಜೆ. ಸತೀಶ್, ಪ್ರಾಧ್ಯಾಪಕರು ಸದಸ್ಯರು

ಪ್ರಸ್ತಾವನೆ: ಪ್ರಾರಂಭದಲ್ಲಿ ಸಭೆಗೆ ಆಗಮಿಸಿದ ಸದಸ್ಯರುಗಳೆಲ್ಲರಿಗೂ ಮಾನ್ಯ ಕುಲಸಚಿವರು ಆತ್ಮೀಯವಾಗಿ ಸ್ವಾಗತ ಕೋರಿದರು. ವಿದ್ಯಾವಿಷಯಕ ಪರಿಷತ್ತಿನ ಈ ಕೆಳಕಂಡ ನೂತನ ಸದಸ್ಯರನ್ನು ಆತ್ಮೀಯವಾಗಿ ಸ್ವಾಗತಿಸಲಾಯಿತು.

1) ಕರ್ನಾಟಕ ಸರ್ಕಾರದಿಂದ ನೂತನವಾಗಿ ಕುಲಸಚಿವ(ಪರೀಕ್ಷಾಂಗ) ಹುದ್ದೆಗೆ ದಿನಾಂಕ:04-09-2025 ರಂದು ವರದಿ ಮಾಡಿಕೊಂಡಿರುವ ಹಾಗೂ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000, ಪ್ರಕರಣ (ಡಿ)(xvii) ರನ್ವಯ ಪದನಿಮಿತ್ತ ವಿದ್ಯಾವಿಷಯಕ ಪರಿಷತ್ ಸದಸ್ಯರಾಗಿ ಸಭೆಗೆ ಆಗಮಿಸಿರುವ ಪ್ರೊ. ಆರ್. ತಿಮ್ಮರಾಯಪ್ಪ, ಕುಲಸಚಿವರು (ಮೌಲ್ಯಮಾಪನ)
2) ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ 30(1) (ix) ರನ್ವಯ ಜೇಷ್ಠತೆಯ ಅನುಸಾರ ಮಾನ್ಯ ಕುಲಪತಿಯವರಿಂದ ನಾಮನಿರ್ದೇಶನವಾದ ಪ್ರೊ. ಚಂದ್ರಶೇಖರ್, ಎಸ್., ಡೀನರು, ಕಲಾ ನಿಕಾಯ ಮತ್ತು ಪ್ರೊ. ವೈ.ಎಲ್. ರಾಮಚಂದ್ರ, ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ.
3) ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ 30(1) (ix) ರನ್ವಯ ಜೇಷ್ಠತೆಯ ಅನುಸಾರ ಮಾನ್ಯ ಕುಲಪತಿಯವರಿಂದ ಶಿಕ್ಷಣ ನಿಕಾಯದ ಡೀನರಾಗಿ ನಾಮನಿರ್ದೇಶನಗೊಂಡಿರುವ ಹಾಗೂ ಕಾಲೇಜು ಅಭಿವೃದ್ಧಿ ಪರಿಷತ್ ನಿರ್ದೇಶಕರಾಗಿ ಪದನಿಮಿತ್ತ ವಿದ್ಯಾವಿಷಯಕ ಪರಿಷತ್ ಸದಸ್ಯರಾದ ಪ್ರೊ. ಗಜಾನನ ಪ್ರಭು ಬಿ.
4) ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ 30(1) (viii) ರನ್ವಯ ಮಾನ್ಯ ಕುಲಪತಿಯವರಿಂದ ನಾಮನಿರ್ದೇಶಿತರಾದ ಪ್ರಾಧ್ಯಾಪಕರ ಸೇವಾ ಜೇಷ್ಠತೆ ಮೇರೆಗೆ ಪದನಿಮಿತ್ತ ವಿದ್ಯಾವಿಷಯಕ ಪರಿಷತ್ ಸದಸ್ಯರು:
   ಎ) ಪ್ರೊ. ಅಶೋಕ್ ಆರ್. ಲಮಾಣಿ, ಪ್ರಾಧ್ಯಾಪಕರು, ಭೌತಶಾಸ್ತ್ರ ವಿಭಾಗ
   ಬಿ) ಪ್ರೊ. ಜಿ.ಜೆ. ಸತೀಶ್, ಪ್ರಾಧ್ಯಾಪಕರು, ಜೀವರಸಾಯನಶಾಸ್ತ್ರ ವಿಭಾಗ
   ಸಿ) ಪ್ರೊ. ನಮ್ರತಾ ಎಂ., ಪ್ರಾಧ್ಯಾಪಕರು, ಇಂಗ್ಲೀಷ್ ವಿಭಾಗ
   ಡಿ) ಪ್ರೊ. ವರ್ಗೀಸ್ ಪಿ.ಎ., ಪ್ರಾಧ್ಯಾಪಕರು, ಪತ್ರಿಕೋದ್ಯಮ ವಿಭಾಗ
   ಇ) ಪ್ರೊ. ವೆಂಕಟೇಶ್ ಎಸ್., ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ವಿಭಾಗ

ಮುಂದುವರೆದು, ವಿದ್ಯಾವಿಷಯಕ ಪರಿಷತ್ತಿನ ಅವಧಿ ಮುಗಿದ ಈ ಕೆಳಕಂಡ ಸದಸ್ಯರುಗಳ ಸೇವೆಯನ್ನು ಸ್ಮರಿಸಿ ಆತ್ಮೀಯವಾಗಿ ಬೀಳ್ಕೊಡಲಾಯಿತು.

1) ದಿನಾಂಕ:22-08-2023 ರಿಂದ ದಿನಾಂಕ:04-09-2025ರವರೆಗೆ ಕುಲಸಚಿವ (ಮೌಲ್ಯಮಾಪನ) ಮತ್ತು ಪದನಿಮಿತ್ತ ವಿದ್ಯಾವಿಷಯಕ ಪರಿಷತ್ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿರುವ ಪ್ರೊ. ಗೋಪಿನಾಥ್ ಎಸ್.ಎಂ. ಪ್ರಾಧ್ಯಾಪಕರು, ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾಲಯ.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

2) ಪ್ರಾಧ್ಯಾಪಕರ ಸೇವಾ ಜೇಷ್ಠತೆ ಮೇರೆಗೆ ಹಾಗೂ ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್ ಪದನಿಮಿತ್ತ ವಿದ್ಯಾವಿಷಯಕ ಪರಿಷತ್ ಸದಸ್ಯರಾಗಿ ಸೇವೆ ಸಲ್ಲಿಸಿರುವ ಹಾಗೂ ಸದಸ್ಯತ್ವದಿಂದ ದಿನಾಂಕ:27–10–2025 ರಂದು ಬಿಡುಗಡೆ ಹೊಂದಿರುವ ಪ್ರೊ. ನಾಗರಾಜ ಹಿರಿಯ ಪ್ರಾಧ್ಯಾಪಕರು, ಪ್ರಾಣಿಶಾಸ್ತ್ರ ವಿಭಾಗ.

3) ಪ್ರಾಧ್ಯಾಪಕರ ಸೇವಾ ಜೇಷ್ಠತೆ ಮೇರೆಗೆ ಪದನಿಮಿತ್ತ ವಿದ್ಯಾವಿಷಯಕ ಪರಿಷತ್ ಸದಸ್ಯರಾಗಿ ಸೇವೆ ಸಲ್ಲಿಸಿ ಸದಸ್ಯತ್ವದಿಂದ ದಿನಾಂಕ:27–10–2025 ರಂದು ಬಿಡುಗಡೆ ಹೊಂದಿದ ಈ ಕೆಳಕಂಡ ಸದಸ್ಯರು.

ಎ) ಪ್ರೊ. ಪಾಟೀಲ್ ಸಂಗನಗೌಡ ಎಸ್. ಹಿರಿಯ ಪ್ರಾಧ್ಯಾಪಕರು, ಶಿಕ್ಷಣ ವಿಭಾಗ.
ಬಿ) ಪ್ರೊ. ಪ್ರಶಾಂತ್‌ನಾಯಕ ಜಿ. ಹಿರಿಯ ಪ್ರಾಧ್ಯಾಪಕರು, ಕನ್ನಡ ಭಾರತಿ ವಿಭಾಗ.
ಸಿ) ಪ್ರೊ. ಹೆಚ್.ಎನ್. ರಮೇಶ್ ಹಿರಿಯ ಪ್ರಾಧ್ಯಾಪಕರು, ಎಂ.ಬಿ.ಎ. ವಿಭಾಗ.
ಡಿ) ಪ್ರೊ. ರಾಮ್‌ಪ್ರಸಾದ್ ಬಿ.ವಿ., ಹಿರಿಯ ಪ್ರಾಧ್ಯಾಪಕರು, ಇಂಗ್ಲೀಷ್ ವಿಭಾಗ.

4) ಜೇಷ್ಠತೆಯನುಸಾರ ಮಾನ್ಯ ಕುಲಪತಿಯವರಿಂದ ಡೀನರ ಹುದ್ದೆಗೆ ನಾಮನಿರ್ದೇಶನಗೊಂಡ ಪದನಿಮಿತ್ತ ವಿದ್ಯಾವಿಷಯಕ ಪರಿಷತ್ ಸದಸ್ಯರಾಗಿ ಸೇವೆ ಸಲ್ಲಿಸಿ ಸದಸ್ಯತ್ವದಿಂದ ಬಿಡುಗಡೆ ಹೊಂದಿರುವ ಈ ಕೆಳಕಂಡ ಸದಸ್ಯರು.

1) ಪ್ರೊ. ನಾರಾಯಣ ಜೆ., ನಿವೃತ್ತ ಹಿರಿಯ ಪ್ರಾಧ್ಯಾಪಕರು ಹಾಗೂ ಡೀನರು ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ
2) ಪ್ರೊ. ಗುರುಲಿಂಗಯ್ಯ, ಎಂ., ಹಿರಿಯ ಪ್ರಾಧ್ಯಾಪಕರು ಹಾಗೂ ಡೀನರು, ಕಲಾ ನಿಕಾಯ
3) ಪ್ರೊ. ಜಗನ್ನಾಥ ಕೆ. ಡಾಂಗೆ., ಪ್ರಾಧ್ಯಾಪಕರು ಹಾಗೂ ಡೀನರು ಶಿಕ್ಷಣ ನಿಕಾಯ

ನಂತರ ಮಾನ್ಯ ಕುಲಪತಿಯವರು ಪ್ರಾಸ್ತಾವಿಕವಾಗಿ ಮಾತನಾಡಿ, ಕುಲಸಚಿವ (ಆಡಳಿತ) ಇವರು ಅವರ ವೈಯಕ್ತಿಕ ಕೆಲಸದ ನಿಮಿತ್ತ ರಜೆಯ ಮೇಲೆ ತೆರಳಿರುವುದರಿಂದ ಅವರ ಅನುಪಸ್ಥಿತಿಯಲ್ಲಿ ಕುಲಸಚಿವ (ಪರೀಕ್ಷಾಂಗ) ರವರು ಸಭೆಯನ್ನು ನಡೆಸುತ್ತಿರುವುದನ್ನು ಸಭೆಯ ಗಮನಕ್ಕೆ ತಂದರು. ಕರ್ನಾಟಕ ಸರ್ಕಾರವು ಪ್ರಕಟಿಸಿರುವ ರಾಜ್ಯೋತ್ಸವ ಪ್ರಶಸ್ತಿಯಲ್ಲಿ ನಮ್ಮ ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕರಾದ ಪ್ರೊ.ರಾಜೇಂದ್ರ ಚೆನ್ನಿಯವರು ಕೂಡ ಆಯ್ಕೆಯಾಗಿರುವುದು ಹೆಮ್ಮೆಯ ವಿಷಯ. ಅವರು ಪ್ರಶಸ್ತಿಗೆ ಅರ್ಹ ವ್ಯಕ್ತಿಯಾಗಿದ್ದು, ಸರ್ಕಾರ ಅವರನ್ನು ಗುರುತಿಸಿದೆ. ಅದೇ ರೀತಿ ಹಿರಿಯರಾದ ಶ್ರೀ ಕೋಣಂದೂರು ಲಿಂಗಪ್ಪ ಮತ್ತು ಹಂಪಿ ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕರಾದ ಪ್ರೊ.ರಹಮತ್ ತರೀಕೆರೆ ಇವರು ಕೂಡ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಎಲ್ಲರೂ ಅಭಿನಂದನಾರ್ಹರು ಎಂದರು. ವಿದ್ಯಾವಿಷಯಕ ಪರಿಷತ್ತಿನ ಎಲ್ಲಾ ಸದಸ್ಯರು ರಾಜ್ಯೋತ್ಸವ ಪ್ರಶಸ್ತಿ ವಿಜೇತರನ್ನು ಅಭಿನಂದಿಸಿದರು. ಮುಂದುವರೆದು ಮಾತನಾಡಿದ ಮಾನ್ಯ ಕುಲಪತಿಯವರು ವಿಶ್ವವಿದ್ಯಾಲಯಕ್ಕೆ ಪ್ರತಿ ತಿಂಗಳು 12.00 ರಿಂದ 15.00 ಲಕ್ಷ ರೂಪಾಯಿಗಳಷ್ಟು ವಿದ್ಯುತ್ ಬಿಲ್ಲು ಬರುತ್ತಿದೆ. ಆದುದರಿಂದ ವೆಚ್ಚ ಕಡಿತ ಮಾಡಬೇಕಾಗಿರುವ ಅಗತ್ಯವಿರುವುದರಿಂದ ಸೋಲಾರ್ ವಿದ್ಯುತ್ ಅಳವಡಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ. ಅಲ್ಲದೇ, ದೂರ ಶಿಕ್ಷಣ ಕೋರ್ಸ್‌ಗಳನ್ನು ಕೂಡ ಪುನರ್ ಆರಂಭಿಸಲು ಪ್ರಯತ್ನಿಸುತ್ತಿದ್ದೇವೆ. ಇದರಿಂದ ಹಣಕಾಸಿನ ಸಮಸ್ಯೆಗೆ ಸ್ವಲ್ಪಮಟ್ಟಿನ ಪರಿಹಾರ ದೊರೆಯುತ್ತದೆ. ಪ್ರತಿವರ್ಷ ಪ್ರಶ್ನೆಪತ್ರಿಕೆ ಮುದ್ರಣಕ್ಕೆ ಬಹಳಷ್ಟು ವೆಚ್ಚವಾಗುತ್ತಿದ್ದು, ಪ್ರಶ್ನೆಪತ್ರಿಕೆಗಳನ್ನು ವಿಶ್ವವಿದ್ಯಾಲಯದಲ್ಲಿಯೇ ಮುದ್ರಿಸುವ ಬಗ್ಗೆ ಪರಿಶೀಲಿಸುತ್ತಿದ್ದೇವೆ. AI generated question papers ವ್ಯವಸ್ಥೆ ಮಾಡುವ ಬಗ್ಗೆ ತಜ್ಞರ ಸಮಿತಿ ರಚಿಸಿ, ಸಾಧಕ ಬಾಧಕಗಳನ್ನು ಪರಿಶೀಲಿಸಿಕೊಂಡು ಅಂತಿಮಗೊಳಿಸಲಾಗುವುದು ಎಂದರು. ನಂತರ ಮಾತನಾಡಿದ ಅವರು, ವಿದ್ಯಾವಿಷಯಕ ಪರಿಷತ್ತಿನಲ್ಲಿ ಪ್ರಸ್ತುತ ಅಧ್ಯಾಪಕರುಗಳು ಮಾತ್ರ ಇದ್ದು, ವಿಶ್ವವಿದ್ಯಾಲಯದ ಶೈಕ್ಷಣಿಕ ಮತ್ತು ಸಂಶೋಧನೆಯ ಅಭಿವೃದ್ಧಿಗೆ ತಮ್ಮ ಸಲಹೆ ಮತ್ತು ಸೂಚನೆಗಳನ್ನು ನೀಡುವುದರ ಮೂಲಕ ಆರೋಗ್ಯಕರ ಚರ್ಚೆ ಮಾಡೋಣ ಎಂದರು. ನಂತರ ಕಾರ್ಯ ಸೂಚಿಯ ಪ್ರಕಾರ ವಿಷಯಗಳನ್ನು ಚರ್ಚೆಗೆ ಕೈಗೆತ್ತಿಕೊಳ್ಳಲಾಯಿತು.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

**2025:ಎಸಿ–4.01:** ದಿನಾಂಕ:25–03–2025 ರಂದು ನಡೆದ ವಿಶೇಷ ವಿದ್ಯಾವಿಷಯಕ ಪರಿಷತ್ ಸಭೆಯ ನಡಾವಳಿಗಳ ದೃಢೀಕರಣ ಕುರಿತು.

**ನಿರ್ಣಯ:** ಚರ್ಚೆಯ ನಂತರ, ದಿನಾಂಕ:25–03–2025 ರಂದು ನಡೆದ ವಿಶೇಷ ವಿದ್ಯಾವಿಷಯಕ ಪರಿಷತ್ ಸಭೆಯ ನಡಾವಳಿಗಳನ್ನು ಅನುಮೋದಿಸಿ ದೃಢೀಕರಿಸಲಾಯಿತು.

**2025:ಎಸಿ–4.02:** ದಿನಾಂಕ:25–03–2025 ರಂದು ನಡೆದ ವಿಶೇಷ ವಿದ್ಯಾವಿಷಯಕ ಪರಿಷತ್ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿ ಅನುಮೋದನೆ ಕುರಿತು.

**ಚರ್ಚೆ:** ದಿನಾಂಕ:25–03–2025 ರಂದು ನಡೆದ ವಿಶೇಷ ವಿದ್ಯಾವಿಷಯಕ ಪರಿಷತ್ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿಗಳನ್ನು ಕುಲಸಚಿವರು ಸಭೆಯ ಅನುಮೋದನೆಗೆ ಮಂಡಿಸಿದರು.

(ಎ): **ಡಾ.ಜಿ.ಎಂ.ಗಣೇಶ್,** ಪ್ರಾಂಶುಪಾಲರು, ಎಂ.ಎಲ್.ಎಂ.ಎನ್. ಶಿಕ್ಷಣ ಮಹಾವಿದ್ಯಾಲಯ, ಚಿಕ್ಕಮಗಳೂರು ಇವರು ಮಾತನಾಡಿ, ವಿಷಯ ಸಂಖ್ಯೆ:2025ಎಸಿ–2.04.1(ಎ)ದಲ್ಲಿ ನಿರ್ಣಯವಾಗಿರುವಂತೆ ನಮ್ಮ ಕಾಲೇಜಿನ ಶಾಶ್ವತ ಸಂಯೋಜನೆ ನವೀಕರಣದ ಕುರಿತಾಗಿ ಕಾಲೇಜು ಅಭಿವೃದ್ಧಿ ಪರಿಷತ್ತಿನಿಂದ ಸರ್ಕಾರಕ್ಕೆ ಪತ್ರ ಬರೆದಿದ್ದು, ಸರ್ಕಾರದಿಂದ ಈವರೆಗೂ ಯಾವುದೇ ಮಾಹಿತಿ ಬಂದಿಲ್ಲ. ಸರ್ಕಾರವು ಕಟ್ಟಡ ಸುರಕ್ಷತೆ ಪ್ರಮಾಣಪತ್ರ, ಅಗ್ನಿಸುರಕ್ಷತಾ ಪ್ರಮಾಣ ಪತ್ರ ಮತ್ತು ನ್ಯಾಕ್‌ನಿಂದ ಮರು ಮಾನ್ಯತೆ ಪಡೆದ ಪ್ರಮಾಣಪತ್ರ ಕೇಳಿದೆ. ಕಾಲೇಜಿನಿಂದ ಲಕ್ಷಾಂತರ ರೂಪಾಯಿಗಳನ್ನು ವೆಚ್ಚ ಮಾಡಿ ಕಟ್ಟಡ ಸುರಕ್ಷತೆ ಪ್ರಮಾಣಪತ್ರ ಮತ್ತು ಅಗ್ನಿಸುರಕ್ಷತಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇವೆ. ಆದರೆ, ನ್ಯಾಕ್‌ನಿಂದ ಹೊಸ ವ್ಯವಸ್ಥೆ ಅಥವಾ ಹೊಸ ವ್ಯವಸ್ಥೆಯಲ್ಲಿ ಕ್ರಮ ಕೈಗೊಳ್ಳಬೇಕೆಂಬುದರಲ್ಲಿ ಗೊಂದಲವಿದ್ದು, ಈ ಬಗ್ಗೆ ಇನ್ನೂ ಅಂತಿಮವಾಗಿಲ್ಲ. ಬಿ.ಇಡಿ. ಕಾಲೇಜುಗಳು N.C.T.E ಯಿಂದ ಮಾನ್ಯತೆ ಪಡೆಯುವುದು ಅಗತ್ಯವಿದ್ದುದ್ದರಿಂದ ಎರಡೆರಡು ಮಾನ್ಯತೆಗಳು ಬೇಡ ಎಂಬ ಉದ್ದೇಶದಿಂದ ಈ ಹಿಂದೆ N.C.T.E ಮತ್ತು ನ್ಯಾಕ್ ಮಧ್ಯದಲ್ಲಿ ಆಗಿದ್ದ MOU ಪ್ರಕಾರ ಟೀಚರ್ ಎಜುಕೇಷನ್ ಕಾಲೇಜುಗಳಿಗೆ ನ್ಯಾಕ್ ಅಗತ್ಯವಿರಲಿಲ್ಲ. ಆದರೆ, ಈಗ ಸದರಿ MOU ಜಾರಿಯಲ್ಲಿ ಇಲ್ಲವಾದ್ದರಿಂದ ನಮಗೆ ತೊಂದರೆಯಾಗಿದೆ ಎಂದರು. ಪ್ರೊ. ಆರ್. ಹಿರೇಮಣಿನಾಯ್ಕ ರವರು ಮಾತನಾಡಿ, ವಿಶ್ವವಿದ್ಯಾಲಯವು ಕಾಲೇಜಿನ ಪರವಾಗಿ ಎಲ್ಲಾ ಕ್ರಮ ಕೈಗೊಂಡಿದೆ. ಆದರೆ, ಸರ್ಕಾರದಿಂದ ಈ ಬಗ್ಗೆ ಕ್ರಮ ಆಗಿಲ್ಲ ಎಂದರು. ಡಾ.ಸಂಧ್ಯಾಕಾವೇರಿಯವರು ಮಾತನಾಡಿ, ವಿಶ್ವವಿದ್ಯಾಲಯವು ಅಗತ್ಯ ಕ್ರಮ ಕೈಗೊಂಡಿದೆ. ಉಳಿದಂತೆ ಎಲ್ಲಿ ಅಡಚಣೆಯಾಗಿದೆ ಎಂಬುದನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಬೇಕು ಎಂದರು.

ಈ ಬಗ್ಗೆ ಸರ್ಕಾರಕ್ಕೆ ಇನ್ನೊಂದು ಪತ್ರ ಬರೆಯುವಂತೆ ಮಾನ್ಯ ಕುಲಪತಿಯವರು ನೀಡಿದ ಸಲಹೆಯನ್ನು ಸಭೆಯು ಒಪ್ಪಿತು.

(ಬಿ): **ಡಾ.ಸಂಧ್ಯಾಕಾವೇರಿ,** ಪ್ರಾಂಶುಪಾಲರು, ಕಟೀಲ್ ಅಶೋಕ ಪೈ ಸ್ಮಾರಕ ಕಾಲೇಜು, ಶಿವಮೊಗ್ಗ ಇವರು ಮಾತನಾಡಿ, ವಿಷಯ ಸಂಖ್ಯೆ:2025:ಎಸಿ–2.04.5(ಎ)ದಲ್ಲಿ ಎನ್.ಸಿ.ಸಿ. ಮತ್ತು ಎನ್.ಎಸ್.ಎಸ್. ವಿದ್ಯಾರ್ಥಿಗಳು ರಾಷ್ಟ್ರೀಯ ಮಟ್ಟದ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಭಾಗವಹಿಸಿದ ಸಂದರ್ಭದಲ್ಲಿ ಮತ್ತು ಕ್ರೀಡಾಪಟುಗಳು ರಾಷ್ಟ್ರಮಟ್ಟದ ಅಂತರ ವಿಶ್ವವಿದ್ಯಾಲಯ ಪಂದ್ಯಾವಳಿಗಳು ಮತ್ತು ಅಂತರರಾಷ್ಟ್ರೀಯ ಮಟ್ಟದ ಅಂಗೀಕೃತ ಕ್ರೀಡಾಕೂಟಗಳಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ವಿಶೇಷ ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಡಬಹುದು. ಇದಕ್ಕೆ ರೆಗ್ಯುಲೇಷನ್‌ಗಳಲ್ಲಿ ತಿದ್ದುಪಡಿ ಆಗಬೇಕಿದ್ದಲ್ಲಿ, ಪರಿಶೀಲಿಸಿ ಮುಂದಿನ ಸಭೆಗೆ ವಿಷಯ ಮಂಡಿಸಬಹುದು ಎಂದು ಮಾನ್ಯ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

ಕುಲಪತಿಯವರು ತಿಳಿಸಿದ್ದು, ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ, ಇದರ ಕುರಿತು ಒಂದು ಸಮಿತಿಯನ್ನು ರಚಿಸಿ, ಸಾಧಕ ಬಾಧಕಗಳನ್ನು ಸಮಗ್ರವಾಗಿ ಪರಿಶೀಲಿಸಿ, ಮಾರ್ಗದರ್ಶಿಗಳನ್ನು ರಚಿಸಿ, ರೆಗ್ಯುಲೇಷನ್‌ಗೆ ತಿದ್ದುಪಡಿ ಮಾಡಲು ಕ್ರಮ ಕೈಗೊಳ್ಳಬಹುದು ಎಂದು ತಿಳಿಸಿದ್ದನ್ನು ಸಭೆಯು ಒಪ್ಪಿತು. ಇದಕ್ಕೆ ಕೈಗೊಂಡ ಕ್ರಮದಲ್ಲಿ "ಕ್ರಮ ಕೈಗೊಳ್ಳಲಾಗುವುದು" ಎಂದು ತಿಳಿಸಲಾಗಿದೆ. ಆದರೆ, ಏನು ಕ್ರಮ ಕೈಗೊಳ್ಳಲಾಗಿದೆ ಎಂಬ ಮಾಹಿತಿ ಒದಗಿಸಿಲ್ಲ ಎಂದರು.

ಮಾನ್ಯ ಕುಲಪತಿಯವರು ಮಾತನಾಡಿ, ಈ ಕುರಿತು ತಕ್ಷಣವೇ ಕ್ರಮ ಕೈಗೊಳ್ಳಲು ಸೂಚಿಸಿದರು. ಮುಂದುವರೆದು ಮಾತನಾಡಿದ ಅವರು, ಇನ್ನು ಮುಂದೆ ಸಭೆಯ ನಿರ್ಣಯಗಳ ಕುರಿತು ಕೈಗೊಂಡ ಕ್ರಮದ ವರದಿಯಲ್ಲಿ 'ಕ್ರಮ ಕೈಗೊಳ್ಳಲಾಗುವುದು' ಎಂದು ವರದಿ ನೀಡಬಾರದು. ಬದಲಿಗೆ ತಕ್ಷಣವೇ ಕ್ರಮ ಕೈಗೊಂಡು ಅದರ ವಿವರಗಳನ್ನು ಒದಗಿಸಬೇಕು ಎಂದರು.

(ಸಿ): **ಡಾ.ಸಂಧ್ಯಾಕಾವೇರಿಯವರು** ವಿಷಯ ಸಂಖ್ಯೆ:2025:ಎಸಿ–2.04.5(ಬಿ)ದಲ್ಲಿ ಪ್ಲಾಸ್ಟಿಕ್ ಮುಕ್ತ ವಿಶ್ವವಿದ್ಯಾಲಯ ಕುರಿತು ಮಾತನಾಡಿ, ವಿಶ್ವವಿದ್ಯಾಲಯದ ಆವರಣದಲ್ಲಿ ಪ್ಲಾಸ್ಟಿಕ್ ಬಳಕೆ ಕಡಿಮೆಯಾಗಬೇಕು. ಪ್ಲಾಸ್ಟಿಕ್ ನೀರಿನ ಬಾಟಲ್, ಬೊಕ್ಕೆ/ಉಡುಗೊರೆಗಳಿಗೆ ಪ್ಲಾಸ್ಟಿಕ್ ಮೇಲೊದಿಕೆ ಮುಂತಾದುವುಗಳ ಬಳಕೆಯನ್ನು ಆದಷ್ಟೂ ಕಡಿಮೆ ಮಾಡಬೇಕು. ಬಳಸಿದ ಪ್ಲಾಸ್ಟಿಕ್‌ನ್ನು ವೈಜ್ಞಾನಿಕ ರೀತಿಯಲ್ಲಿ ವಿಲೇವಾರಿ ಮಾಡಬೇಕು. ಇದಕ್ಕಾಗಿ ಸಮಗ್ರವಾಗಿ ಅಧ್ಯಯನ ಮಾಡಿ ಮಾರ್ಗಸೂಚಿಗಳನ್ನು ಸಿದ್ಧಪಡಿಸಿ ಹೊರಡಿಸಬೇಕು. ಅಲ್ಲದೇ ವಿಶ್ವವಿದ್ಯಾಲಯದ ವ್ಯಾಪ್ತಿಯ ಕಾಲೇಜುಗಳಲ್ಲಿ ಕೂಡ ಈ ಬಗ್ಗೆ ಅರಿವು ಮೂಡಿಸಿ ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡುವಂತೆ ಸೂಚನೆ ನೀಡಬೇಕು ಎಂದು ಚರ್ಚಿಸಿದ್ದು, ಮಾನ್ಯ ಕುಲಪತಿಯವರು ಮಾತನಾಡಿ, ಇದೊಂದು ಉತ್ತಮ ಸಲಹೆಯಾಗಿದ್ದು, ಇದನ್ನು ಒಪ್ಪಬಹುದು. ವಿಶ್ವವಿದ್ಯಾಲಯದ ಪರಿಸರ ಅಧ್ಯಯನ ವಿಭಾಗದ ಸಹಯೋಗದೊಂದಿಗೆ, ಈ ಕುರಿತು ಸಮಗ್ರ ಪರಿಶೀಲನೆ ನಡೆಸಿ ಮಾರ್ಗಸೂಚಿಗಳನ್ನು ಸಿದ್ಧಪಡಿಸಲಾಗುವುದು ಎಂದು ತಿಳಿಸಿದ್ದರು. ಇದಕ್ಕೆ ಕೂಡ ಈ ಬಗ್ಗೆ ಕೈಗೊಂಡ ಕ್ರಮದ ವರದಿಯಲ್ಲಿ 'ಕ್ರಮ ಕೈಗೊಳ್ಳಲಾಗುವುದು' ಎಂದು ತಿಳಿಸಲಾಗಿದೆ. ಆದರೆ, ಈ ಬಗ್ಗೆ 'ಯಾವ ಕ್ರಮ ಆಗಿದೆ' ಎಂದು ತಿಳಿಸಿಲ್ಲ ಮತ್ತು ಕಾಲೇಜುಗಳಿಗೆ ಕೂಡ ಸುತ್ತೋಲೆ ಬಂದಿಲ್ಲ ಎಂದರು.

ಮಾನ್ಯ ಕುಲಪತಿಯವರು ಮಾತನಾಡಿ, ಈ ಬಗ್ಗೆ ಎಸ್ಟೇಟ್ ವಿಭಾಗದವರು ಪರಿಸರ ಅಧ್ಯಯನ ವಿಭಾಗದವರ ಸಹಯೋಗದೊಂದಿಗೆ ಒಂದು ಗೈಡ್‌ಲೈನ್ (ಮಾರ್ಗಸೂಚಿ) ಸಿದ್ಧಪಡಿಸಿ, ಅದನ್ನು ವಿಶ್ವವಿದ್ಯಾಲಯದಲ್ಲಿ ಅಳವಡಿಸುವ ಬಗ್ಗೆ ಮತ್ತು ಕಾಲೇಜುಗಳಿಗೆ ಕೂಡ ಸುತ್ತೋಲೆ ಹೊರಡಿಸುವ ಬಗ್ಗೆ ಕ್ರಮ ಕೈಗೊಳ್ಳಬೇಕು ಎಂದರು.

(ಡಿ): **ಡಾ.ಸಂಧ್ಯಾಕಾವೇರಿಯವರು** ಮಾತನಾಡಿ, ವಿಷಯ ಸಂಖ್ಯೆ:2025:ಎಸಿ–2.04.5(ಸಿ)ದಲ್ಲಿ ಯು.ಯು.ಸಿ.ಎಂ.ಎಸ್.ನ ಆನ್‌ಲೈನ್ ಮೂಲಕ ನಡೆಯುವ ಸಂಯೋಜನೆ, ಪ್ರವೇಶ, ಪ್ರವೇಶ ಅನುಮೋದನೆ, ಪರೀಕ್ಷಾ ಕಾರ್ಯಗಳು, ವಿದ್ಯಾರ್ಥಿವೇತನ ಮುಂತಾದ ಎಲ್ಲಾ ಕಾರ್ಯಗಳಿಗೆ ಸಮರ್ಪಕ ಮಾಹಿತಿ ಮತ್ತು ತರಬೇತಿಯ ಕೊರತೆಯಿಂದ ಆಗುತ್ತಿರುವ ತಪ್ಪುಗಳನ್ನು ಕಡಿಮೆ ಮಾಡಲು ಸಂಬಂಧಪಟ್ಟ ಸಿಬ್ಬಂದಿಗಳಿಗೆ ಸೂಕ್ತ ತರಬೇತಿ ನೀಡುವುದಾಗಿ ಕುಲಸಚಿವ (ಪರೀಕ್ಷಾಂಗ) ರವರು ತಿಳಿಸಿದ್ದಾರೆ. ಆದರೆ, ಕೈಗೊಂಡ ಕ್ರಮದ ವರದಿಯಲ್ಲಿ ಕಾಲೇಜು ಅಭಿವೃದ್ಧಿ ಪರಿಷತ್ತಿನವರು ಪ್ರತಿ ವರ್ಷವೂ ಸಂಯೋಜಿತ ಕಾಲೇಜುಗಳ ಸಿಬ್ಬಂದಿಗಳಿಗೆ ಸಿ.ಡಿ.ಸಿ. ವಿಭಾಗದಿಂದ ಆನ್‌ಲೈನ್ ಸಂಯೋಜನೆಗೆ ಸಂಬಂಧಿಸಿದಂತೆ ತರಬೇತಿ ನೀಡಲಾಗುವುದು ಎಂದು ತಿಳಿಸಿದ್ದಾರೆ. ಸಂಯೋಜನೆ ಹೊರತುಪಡಿಸಿ ಉಳಿದ ಕಾರ್ಯಗಳ ಬಗ್ಗೆ ಕೂಡ ತರಬೇತಿ ಅಗತ್ಯವಿದೆ ಎಂದರು. ಸಭೆಯಲ್ಲಿದ್ದ ಬಹಳಷ್ಟು ಪ್ರಾಂಶುಪಾಲರು ಇದಕ್ಕೆ ಧ್ವನಿಗೂಡಿಸಿದರು.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
17/11

ಮಾನ್ಯ ಕುಲಪತಿಯವರು ಮಾತನಾಡಿ, ಸಂಯೋಜನೆ ಮಾತ್ರವಲ್ಲದೇ U.U.C.M.Sನ ಎಲ್ಲಾ ಕಾರ್ಯಗಳ ಬಗ್ಗೆ U.U.C.M.S ಘಟಕ, ಸಿ.ಡಿ.ಸಿ., ಮತ್ತು ಪರೀಕ್ಷಾ ವಿಭಾಗದಿಂದ ಕಾಲೇಜಿನವರಿಗೆ ಒಂದೆರಡು ದಿನಗಳ ತರಬೇತಿ ಕಾರ್ಯಾಗಾರ ನಡೆಸಲಾಗುವುದು ಎಂದರು.

(ಇ): ವಿಷಯ ಸಂಖ್ಯೆ:2025-ಎಸಿ-2.04.1(ಎ) ರ ಕುರಿತು ಸುದೀರ್ಘ ಚರ್ಚೆಯ ನಂತರ ಕೈಗೊಂಡ ಕ್ರಮದಲ್ಲಿ ಕ್ರಮ ಸಂಖ್ಯೆ (2)ನ್ನು ಕೈಬಿಡಲು ನಿರ್ಣಯಿಸಿ U.U.C.M.S ವಿಭಾಗದವರು ಕ್ರಮ ಜರುಗಿಸಲು ನಿರ್ಣಯಿಸಲಾಯಿತು.

ನಿರ್ಣಯ: ಮೇಲ್ಕಂಡ ಚರ್ಚೆ ಮತ್ತು ನಿರ್ಣಯಗಳ ನಂತರ ದಿನಾಂಕ:25-03-2025 ರಂದು ನಡೆದ ವಿಶೇಷ ವಿದ್ಯಾವಿಷಯಕ ಪರಿಷತ್ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿಯನ್ನು ಸಭೆಯು ಅನುಮೋದಿಸಿತು ಮತ್ತು ಇನ್ನು ಮುಂದೆ ಕೈಗೊಂಡ ಕ್ರಮದ ವರದಿಯಲ್ಲಿ "ಕ್ರಮ ಕೈಗೊಳ್ಳಲಾಗುವುದು" ಎಂದು ತಿಳಿಸದೇ ಸೂಕ್ತ ಕ್ರಮ ಕೈಗೊಂಡು ಅದರ ವರದಿಯನ್ನು ಮಾತ್ರ ನೀಡಬೇಕೆಂದು ಮತ್ತು ಮೇಲಿನಂತೆ ಚರ್ಚಿಸಿರುವುದನ್ನು ಕಾಲಮಿತಿಯಲ್ಲಿ ಅನುಷ್ಠಾನಗೊಳಿಸಲು ಸರ್ವಾನುಮತದಿಂದ ನಿರ್ಣಯಿಸಲಾಯಿತು.

**2025:ಎಸಿ-4.03:** ದಿನಾಂಕ:25-04-2025 ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ನಡಾವಳಿಗಳ ದೃಢೀಕರಣ ಕುರಿತು.

ನಿರ್ಣಯ: ಚರ್ಚೆಯ ನಂತರ ದಿನಾಂಕ:25-04-2025 ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸಲಾಯಿತು.

**2025:ಎಸಿ-4.04:** ದಿನಾಂಕ:25-04-2025 ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ನಡಾವಳಿಗಳ ಮೇಲೆ ಕ್ರಮಗಳ ವರದಿ ಅನುಮೋದನೆ ಕುರಿತು.

ಚರ್ಚೆ: ಡಾ.ಜಿ.ಎಂ.ಗಣೇಶ್, ಪ್ರಾಂಶುಪಾಲರು, ಎಂ.ಎಲ್.ಎಂ.ಎನ್. ಶಿಕ್ಷಣ ಮಹಾವಿದ್ಯಾಲಯ, ಚಿಕ್ಕಮಗಳೂರು ಇವರು ವಿಷಯ ಸಂಖ್ಯೆ:2025ಎಸಿ-3.10(1)ರ ಕುರಿತು ಮಾತನಾಡಿ, ವಿದ್ಯಾರ್ಥಿಗಳು ಪದವಿ ಹಂತದಲ್ಲಿ ಮೂರು ವರ್ಷಗಳ ಕಾಲ ರೋವರ್ಸ್ ಮತ್ತು ರೇಂಜರ್ಸ್ ಚಟುವಟಿಕೆಗಳಲ್ಲಿ ಪಾಲ್ಗೊಂಡಿರುತ್ತಾರೆ. ಬಿ.ಇಡಿ. ಕಾಲೇಜುಗಳಲ್ಲಿ ಈ ಘಟಕಗಳು ಇಲ್ಲದಿರುವುದರಿಂದ ಈ ಶುಲ್ಕವನ್ನು ವಿದ್ಯಾರ್ಥಿಗಳಿಂದ ಪಡೆಯುವ ಅಗತ್ಯವಿಲ್ಲ ಎಂದರು.

ಪ್ರೊ. ಆರ್.ಹಿರೇಮಣಿನಾಯ್ಕರವರು ಮಾತನಾಡಿ, ರೋವರ್ಸ್ ಮತ್ತು ರೇಂಜರ್ಸ್ ಶುಲ್ಕವನ್ನು ಸರ್ಕಾರದ ಆದೇಶದ ಪ್ರಕಾರ ಸಂಗ್ರಹಿಸಲಾಗುತ್ತಿದೆ. ವಿಶ್ವವಿದ್ಯಾಲಯವು ಸರ್ಕಾರದ ನಿಯಮಗಳನ್ನು ಉಲ್ಲಂಘಿಸಲಾಗದು ಎಂದರು. ಶಿಕ್ಷಣ ನಿಕಾಯದ ಡೀನರಾದ ಪ್ರೊ. ಗಜಾನನ ಪ್ರಭುರವರು ಮಾತನಾಡಿ, ಇದು ಕೋರ್ಸ್ ಅಲ್ಲ ಚಟುವಟಿಕೆ ಅಷ್ಟೇ ಎಂದರು. ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ ಪದವಿ ನಂತರ ಬಿ.ಇಡಿ.ಯಲ್ಲಿ ಕೂಡ ಅನುಷ್ಠಾನಗೊಳಿಸಿದರೆ ಇದು Extended Activity ಆಗುತ್ತದೆ ಎಂದರು.

ಡಾ. ಎನ್.ಡಿ. ವಿರೂಪಾಕ್ಷರವರು ಮಾತನಾಡಿ, ಸರ್ಕಾರದ ನಿರ್ದೇಶನದ ಪ್ರಕಾರ ಕಾಲೇಜುಗಳಿಗೆ ವಿಶ್ವವಿದ್ಯಾಲಯದಿಂದ ಗೈಡ್‌ಲೈನ್ (ಮಾರ್ಗಸೂಚಿ) ನೀಡಲಾಗುತ್ತಿದ್ದು, ಕಾರ್ಯಕ್ರಮ ಆಗುತ್ತಿದೆ. ಬಿ.ಇಡಿ. ಕಾಲೇಜುಗಳಲ್ಲಿ ಕೂಡ ರೋವರ್ಸ್ ಮತ್ತು ರೇಂಜರ್ಸ್ ಘಟಕ ಆರಂಭಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು. ಈ ಘಟಕದ ಚಟುವಟಿಕೆಗಳಿಂದ ಬಿ.ಇಡಿ. ವಿದ್ಯಾರ್ಥಿಗಳಿಗೆ ತುಂಬಾ ಅನುಕೂಲವಾಗುತ್ತದೆ ಎಂದರು. ಈ ಬಗ್ಗೆ ತಕ್ಷಣದ ಕ್ರಮ ಕೈಗೊಳ್ಳುವಂತೆ ಮಾನ್ಯ ಕುಲಪತಿಯವರು ತಿಳಿಸಿದರು.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

**ನಿರ್ಣಯ:** ಮೇಲಿನ ಚರ್ಚೆಯ ನಂತರ ದಿನಾಂಕ:25-04-2025 ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ನಡಾವಳಿಗಳ ಮೇಲೆ ಕ್ರಮಗಳ ವರದಿಯನ್ನು ಸಭೆಯು ಅನುಮೋದಿಸಿತು.

**2025:ಎಸಿ-4.05:** ದಿನಾಂಕ:10-09-2025 ರಂದು ನಡೆದ ಕಲಾ ನಿಕಾಯದ ಸಭೆಯ ನಡಾವಳಿಗಳ ಅನುಮೋದನೆ ಕುರಿತು.

**ನಿರ್ಣಯ:** ಚರ್ಚೆಯ ನಂತರ ಕಲಾ ನಿಕಾಯದ ಡೀನರಾದ ಪ್ರೊ.ಚಂದ್ರಶೇಖರ್ ಎಸ್.ರವರು ಮಂಡಿಸಿದ ದಿನಾಂಕ:10-09-2025 ರಂದು ನಡೆದ ಕಲಾ ನಿಕಾಯದ ಸಭೆಯ ನಡಾವಳಿಗಳನ್ನು ಸಭೆಯು ಅನುಮೋದಿಸಿತು.

**2025:ಎಸಿ-4.06:** ದಿನಾಂಕ:10-09-2025 ರಂದು ನಡೆದ ವಾಣಿಜ್ಯ ನಿಕಾಯದ ಸಭೆಯ ನಡಾವಳಿಗಳ ಅನುಮೋದನೆ ಕುರಿತು.

**ನಿರ್ಣಯ:** ಚರ್ಚೆಯ ನಂತರ ವಾಣಿಜ್ಯ ನಿಕಾಯದ ಡೀನರಾದ ಪ್ರೊ. ಆರ್. ಹಿರೇಮಣಿನಾಯ್ಕರವರು ಮಂಡಿಸಿದ ದಿನಾಂಕ:10-09-2025 ರಂದು ನಡೆದ ವಾಣಿಜ್ಯ ನಿಕಾಯದ ಸಭೆಯ ನಡಾವಳಿಗಳನ್ನು ಸಭೆಯು ಅನುಮೋದಿಸಿತು.

**2025:ಎಸಿ-4.07:** ದಿನಾಂಕ:11-09-2025 ರಂದು ನಡೆದ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಸಭೆಯ ನಡಾವಳಿಗಳ ಅನುಮೋದನೆ ಕುರಿತು.

**ನಿರ್ಣಯ:** ಚರ್ಚೆಯ ನಂತರ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಡೀನರಾದ ಪ್ರೊ. ವೈ.ಎಲ್. ರಾಮಚಂದ್ರರವರು ಮಂಡಿಸಿದ ದಿನಾಂಕ:11-09-2025ರಂದು ನಡೆದ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಸಭೆಯ ನಡಾವಳಿಗಳನ್ನು ಸಭೆಯು ಅನುಮೋದಿಸಿತು.

**2025:ಎಸಿ-4.08:** ದಿನಾಂಕ:11-09-2025 ರಂದು ನಡೆದ ಶಿಕ್ಷಣ ನಿಕಾಯದ ಸಭೆಯ ನಡಾವಳಿಗಳ ಅನುಮೋದನೆ ಕುರಿತು.

**ನಿರ್ಣಯ:** ಚರ್ಚೆಯ ನಂತರ ಶಿಕ್ಷಣ ನಿಕಾಯದ ಡೀನರಾದ ಪ್ರೊ. ಗಜಾನನ ಪ್ರಭುರವರು ಮಂಡಿಸಿದ ದಿನಾಂಕ:11-09-2025 ರಂದು ನಡೆದ ಶಿಕ್ಷಣ ನಿಕಾಯದ ಸಭೆಯ ನಡಾವಳಿಗಳನ್ನು ಸಭೆಯು ಅನುಮೋದಿಸಿತು.

**2025:ಎಸಿ-4.09:** 2024-25ನೇ ಸಾಲಿನ ವಾರ್ಷಿಕ ವರದಿಯ ಅನುಮೋದನೆ ಕುರಿತು.

**ನಿರ್ಣಯ:** ಚರ್ಚೆಯ ನಂತರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ 2000, ಪ್ರಕರಣ 50ರನ್ವಯ ಸರ್ಕಾರಕ್ಕೆ ಸಲ್ಲಿಸಲು ಸಿದ್ಧಪಡಿಸಲಾದ ವಿಶ್ವವಿದ್ಯಾಲಯದ 2024-25ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆಯು ಅನುಮೋದಿಸಿತು.

## ಕಾಲೇಜು ಅಭಿವೃದ್ಧಿ ಪರಿಷತ್ ವಿಭಾಗ

**2025:ಎಸಿ-4.10:** 2025-26ನೇ ಸಾಲಿಗೆ ಮುಂದುವರಿಕೆ / ಹೊಸ ಸಂಯೋಜನೆಗೆ ಅನುಮತಿ ನೀಡುವ ಬಗ್ಗೆ.

**ನಿರ್ಣಯ:** ತಾಂತ್ರಿಕ ಸಮಸ್ಯೆಯಿಂದಾಗಿ ಯು.ಯು.ಸಿ.ಎಂ.ಎಸ್. ಪೋರ್ಟ್‌ಲ್ ಮೂಲಕ ಸಕಾಲದಲ್ಲಿ ಮರು ಸಂಯೋಜನೆಗೆ ಅರ್ಜಿ ಸಲ್ಲಿಸಲು ಸಾಧ್ಯವಾಗದ ಎ.ವಿ.ಎಸ್. ಶಿಕ್ಷಣ ಮಹಾವಿದ್ಯಾಲಯ, ಚಿಕ್ಕಮಗಳೂರು ಮತ್ತು ಚನ್ನಗಿರಿ ತಾಲ್ಲೂಕಿನ ಅಜ್ಜಿಹಳ್ಳಿಯಿಂದ ಶಿವಮೊಗ್ಗಕ್ಕೆ ಎನ್.ಸಿ.ಟಿ.ಇ. ಮಾನ್ಯತೆಯೊಂದಿಗೆ ವರ್ಗಾವಣೆಗೊಂಡ ಶ್ರೀ ಪಾರ್ಶ್ವನಾಥ ಶಿಕ್ಷಣ ಮಹಾವಿದ್ಯಾಲಯ, ಶಿವಮೊಗ್ಗ ಇಲ್ಲಿಗೆ ಭೇಟಿ ನೀಡಿದ್ದ ಸ್ಥಳೀಯ ತಪಾಸಣಾ ಸಮಿತಿಗಳು ಸಲ್ಲಿಸಿದ್ದ ವರದಿಗಳ ಅನ್ವಯ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

ಸಂಯೋಜನಾ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸಿರುವುದನ್ನು ಪರಿಗಣಿಸಿ, ಸದರಿ ಕಾಲೇಜುಗಳಿಗೆ 2025-26ನೇ ಶೈಕ್ಷಣಿಕ ಸಾಲಿಗೆ ಸರ್ಕಾರದ ಆದೇಶದಂತೆ ಸಂಯೋಜನಾ ಆದೇಶವನ್ನು ನೀಡಲು ಸಭೆಯು ಅನುಮತಿಸಿತು.

**2025:ಎಸಿ-4.11:** 2025-26ನೇ ಶೈಕ್ಷಣಿಕ ಸಾಲಿಗೆ ಹೊಸದಾಗಿ ಪದವಿ ಕಾಲೇಜು ಪ್ರಾರಂಭಿಸಲು ಸಂಯೋಜನೆಗೆ ಅನುಮೋದನೆ ನೀಡುವ ಬಗ್ಗೆ.

**ನಿರ್ಣಯ:** ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ದಿನಾಂಕ:15-05-2025ರ ಪತ್ರ ಮತ್ತು ದಿನಾಂಕ:20-05-2025ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯದ ಮೇರೆಗೆ, ಎ.ವಿ.ಎಸ್. ಎಜುಕೇಷನ್ ಸಂಸ್ಥೆಯವರು ಚಿಕ್ಕಮಗಳೂರಿನಲ್ಲಿ ಇನ್ಫಿನಿಟಿ ಅಜೇಶ್ ಸಂಹಿತ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಕಾಲೇಜನ್ನು ಬಿ.ಕಾಂ., ಬಿ.ಸಿ.ಎ., ಬಿ.ಎಸ್ಸಿ., ಮತ್ತು ಬಿ.ಬಿ.ಎ., ಕೋರ್ಸ್‌ಗಳೊಂದಿಗೆ ಹೊಸದಾಗಿ ಆರಂಭಿಸಲು ಸ್ಥಳೀಯ ತಪಾಸಣಾ ಸಮಿತಿಯು ಸಲ್ಲಿಸಿದ್ದ ವರದಿಯನ್ನು ಕಾಲಾವಕಾಶ ಕಡಿಮೆ ಇದ್ದುದ್ದರಿಂದ ಸಿಂಡಿಕೇಟ್ ಸಭೆಯ ಅನುಮೋದನೆ ಕಾಯ್ದಿರಿಸಿ, ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ ಸರ್ಕಾರಕ್ಕೆ ಕಳುಹಿಸಿರುವ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

## ಶೈಕ್ಷಣಿಕ ವಿಭಾಗ

**2025:ಎಸಿ-4.12:** 2025-26ನೇ ಶೈಕ್ಷಣಿಕ ಸಾಲಿನಿಂದ ಕುವೆಂಪು ವಿಶ್ವವಿದ್ಯಾಲಯದ ಎಲ್ಲಾ ಸ್ನಾತಕೋತ್ತರ ಪದವಿಗಳ ಶುಲ್ಕಗಳ ಪರಿಷ್ಕರಣೆ ಮಾಡಿರುವ ಕುರಿತು.

**ನಿರ್ಣಯ:** ಕರ್ನಾಟಕ ಸರ್ಕಾರವು ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಏಕರೂಪದ ಶುಲ್ಕ ಮತ್ತು ಸಂಭಾವನೆಯ ದರಗಳನ್ನು ನಿಗದಿಪಡಿಸಿದೆ. ಅದರಂತೆ ವಿಶ್ವವಿದ್ಯಾಲಯದ ಸ್ನಾತಕೋತ್ತರ ಪದವಿಗಳ ವಿವಿಧ ಶುಲ್ಕಗಳನ್ನು ಪರಿಷ್ಕರಿಸುವ ಸಲುವಾಗಿ ದಿನಾಂಕ:22-05-2025ರಂದು ನಡೆದ ಶುಲ್ಕ ಪರಿಷ್ಕರಣಾ ಸಮಿತಿಯ ಸಭೆಯಲ್ಲಿ ಚರ್ಚಿಸಿದ್ದು, ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ವ್ಯಾಪ್ತಿಯಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಲ್ಲಿ ಹೆಚ್ಚಿನವರು ಗ್ರಾಮೀಣ ಪ್ರದೇಶದವರಾಗಿದ್ದು, ಆರ್ಥಿಕವಾಗಿ ಹಿಂದುಳಿದವರಾಗಿರುವ ಹಿನ್ನೆಲೆಯಲ್ಲಿ ಸರ್ಕಾರದ ಏಕರೂಪ ಶುಲ್ಕಗಳನ್ನು ಜಾರಿಗೊಳಿಸಿದರೆ ವಿದ್ಯಾರ್ಥಿಗಳಿಗೆ ಹೊರೆಯಾಗುತ್ತದೆ ಎಂಬುದನ್ನು ಪರಿಗಣಿಸಿ, ಎಲ್ಲಾ ಸ್ನಾತಕೋತ್ತರ ಪದವಿಯ ಶುಲ್ಕಗಳನ್ನು ಶೇ.40ರಷ್ಟು ಹೆಚ್ಚಿಸಲು ನಿರ್ಣಯಿಸಿರುವುದನ್ನು ಪ್ರಾಧಿಕಾರಗಳ ಅನುಮೋದನೆ ಕಾಯ್ದಿರಿಸಿ, ಅಧಿಸೂಚನೆ ಹೊರಡಿಸಿರುವ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

**2025:ಎಸಿ-4.13:** 2025-26ನೇ ಶೈಕ್ಷಣಿಕ ಸಾಲಿನಿಂದ ಕುವೆಂಪು ವಿಶ್ವವಿದ್ಯಾಲಯದ ಸ್ನಾತಕ/ ಸ್ನಾತಕೋತ್ತರ ಪದವಿಗಳ ವಿವಿಧ ಪ್ರಮಾಣ ಪತ್ರಗಳ ಶುಲ್ಕಗಳನ್ನು ಪರಿಷ್ಕರಣೆ ಮಾಡಿರುವ ಕುರಿತು.

**ನಿರ್ಣಯ:** ಕರ್ನಾಟಕ ಸರ್ಕಾರವು ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಏಕರೂಪದ ಶುಲ್ಕಗಳನ್ನು ನಿಗದಿಪಡಿಸಿದ್ದು, ಅದರಂತೆ ವಿಶ್ವವಿದ್ಯಾಲಯದ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳ ವಿವಿಧ ಪ್ರಮಾಣಪತ್ರಗಳ ಶುಲ್ಕಗಳನ್ನು ಪರಿಷ್ಕರಿಸುವ ಸಲುವಾಗಿ ದಿನಾಂಕ:22-05-2025ರಂದು ನಡೆದ ಶುಲ್ಕ ಪರಿಷ್ಕರಣಾ ಸಮಿತಿಯ ಸಭೆಯಲ್ಲಿ ಚರ್ಚಿಸಿದ್ದು, ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಲ್ಲಿ ಹೆಚ್ಚಿನವರು ಗ್ರಾಮೀಣ ಪ್ರದೇಶದವರಾಗಿದ್ದು, ಆರ್ಥಿಕವಾಗಿ ಹಿಂದುಳಿದವರಾಗಿರುವ ಹಿನ್ನೆಲೆಯಲ್ಲಿ ಸರ್ಕಾರದ ಏಕರೂಪ ಶುಲ್ಕಗಳನ್ನು ಜಾರಿಗೊಳಿಸಿದರೆ ವಿದ್ಯಾರ್ಥಿಗಳಿಗೆ ಹೊರೆಯಾಗುತ್ತದೆ ಎಂಬುದನ್ನು ಪರಿಗಣಿಸಿ, 2025-26ನೇ ಶೈಕ್ಷಣಿಕ ಸಾಲಿನಿಂದ ಎಲ್ಲಾ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳ ವಿವಿಧ ಪ್ರಮಾಣಪತ್ರಗಳ ಶುಲ್ಕಗಳನ್ನು ಶೇ.40ರಷ್ಟು ಹೆಚ್ಚಿಸಲು ನಿರ್ಣಯಿಸಿದ್ದು, ಅದರಂತೆ ಪ್ರಾಧಿಕಾರಗಳ ಅನುಮೋದನೆ ಕಾಯ್ದಿರಿಸಿ,



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

ಮಾನ್ಯ ಕುಲಪತಿಯವರ ಅನುಮೋದನೆಯನುಸಾರ 2025–26ನೇ ಶೈಕ್ಷಣಿಕ ಸಾಲಿನಿಂದ ಕುವೆಂಪು ವಿಶ್ವವಿದ್ಯಾಲಯದ ಸ್ನಾತಕ/ಸ್ನಾತಕೋತ್ತರ ಪದವಿಗಳ ವಿವಿಧ ಪ್ರಮಾಣ ಪತ್ರಗಳ ಶುಲ್ಕಗಳನ್ನು ಪರಿಷ್ಕರಣೆ ಮಾಡಿ ಅಧಿಸೂಚನೆ ಹೊರಡಿಸಿರುವ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

**2025:ಎಸಿ–4.14:** 2024–25ನೇ ಶೈಕ್ಷಣಿಕ ಸಾಲಿನಿಂದ ಕುವೆಂಪು ವಿಶ್ವವಿದ್ಯಾಲಯದ ಪಿಹೆಚ್.ಡಿ. ಪದವಿಯ ಪ್ರವೇಶಾತಿ ಶುಲ್ಕವನ್ನು ಪರಿಷ್ಕರಣೆ ಮಾಡಿರುವ ಕುರಿತು.

ನಿರ್ಣಯ: ವಿಶ್ವವಿದ್ಯಾಲಯದಲ್ಲಿ ಪಿಹೆಚ್.ಡಿ. ಪದವಿಯ ವಿವಿಧ ಶುಲ್ಕಗಳನ್ನು ಕೆಲವು ವರ್ಷಗಳಿಂದ ಪರಿಷ್ಕರಿಸದಿರುವ ಹಿನ್ನೆಲೆಯಲ್ಲಿ ದಿನಾಂಕ:22–05–2025ರಂದು ನಡೆದ ಶುಲ್ಕ ಪರಿಷ್ಕರಣಾ ಸಮಿತಿ ಸಭೆಯಲ್ಲಿ ನಿರ್ಣಯಿಸಿದಂತೆ ಪರಿಷ್ಕರಿಸಲಾಗಿದ್ದು, ಇದನ್ನು ಪ್ರಾಧಿಕಾರಗಳ ಅನುಮೋದನೆ ಕಾಯ್ದಿರಿಸಿ ಮಾನ್ಯ ಕುಲಪತಿಯವರ ಆದೇಶದ ಮೇರೆಗೆ ವಿಶ್ವವಿದ್ಯಾಲಯದ ಪಿಹೆಚ್.ಡಿ. ಪದವಿಯ ವಿವಿಧ ಶುಲ್ಕಗಳನ್ನು ಪರಿಷ್ಕರಿಸಿ ಅಧಿಸೂಚನೆ ಹೊರಡಿಸಿದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

**2025:ಎಸಿ–4.15:** ಶ್ರೀ ಸೋಮಶೇಖರ್ ಪಿ.ಸಿ. ಬಿನ್. ಪರಶುರಾಮಪ್ಪ ಬಿ.ಹೆಚ್., ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ ದತ್ತಿನಿಧಿ ನಗದು ಬಹುಮಾನ ಸ್ಥಾಪನೆ ಬಗ್ಗೆ. (ಸ್ನಾತಕೋತ್ತರ ಪತ್ರಿಕೋದ್ಯಮ ಮತ್ತು ಸಮೂಹ ಸಂಹವನ ಅಧ್ಯಯನ ವಿಭಾಗ)

ನಿರ್ಣಯ: ವಿಶ್ವವಿದ್ಯಾಲಯದಲ್ಲಿ ಹಿರಿಯ ಸಹಾಯಕರಾಗಿ ಕರ್ತವ್ಯ ನಿರ್ವಹಿಸಿ ನಿವೃತ್ತರಾಗಿರುವ ಶ್ರೀ ಸೋಮಶೇಖರ ಪಿ.ಸಿ., ಶಂಕರಘಟ್ಟ ಇವರು "ಸೋಮಶೇಖರ ಪಿ.ಸಿ. ಬಿನ್ ಪರಶುರಾಮಪ್ಪ, ಬಿ.ಹೆಚ್., ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ" ಹೆಸರಿನಲ್ಲಿ 2025–26ನೇ (35ನೇ ಘಟಿಕೋತ್ಸವದಿಂದ) ಶೈಕ್ಷಣಿಕ ಸಾಲಿನಿಂದ ಸ್ನಾತಕೋತ್ತರ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಷಯದಲ್ಲಿ ಪ್ರಥಮ ರ್‍ಯಾಂಕ್ ಪಡೆದ ವಿದ್ಯಾರ್ಥಿ/ವಿದ್ಯಾರ್ಥಿನಿಗೆ ದತ್ತಿನಿಧಿ ನಗದು ಬಹುಮಾನ ನೀಡುವ ಸಲುವಾಗಿ ರೂ.25,000/–ಗಳ ದತ್ತಿನಿಧಿಯನ್ನು ಸ್ಥಾಪಿಸಲು ಮತ್ತು ಸದರಿ ದತ್ತಿನಿಧಿ ಮೊಬಲಗಿನಿಂದ ಬರುವ ಬಡ್ಡಿಯ ಹಣವನ್ನು ನಗದು ಬಹುಮಾನವಾಗಿ ನೀಡಲು ಸಭೆಯು ಸರ್ವಾನುಮತದಿಂದ ಅನುಮೋದಿಸಿತು ಮತ್ತು ದತ್ತಿನಿಧಿ ದಾನಿಗಳನ್ನು ಅಭಿನಂದಿಸಿತು.

**2025:ಎಸಿ–4.16:** ಶ್ರೀ ಸೋಮಶೇಖರ್ ಪಿ.ಸಿ. ಬಿನ್. ಪರಶುರಾಮಪ್ಪ ಬಿ.ಹೆಚ್., ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ ದತ್ತಿನಿಧಿ ನಗದು ಬಹುಮಾನ ಸ್ಥಾಪನೆ ಬಗ್ಗೆ. (ಸ್ನಾತಕೋತ್ತರ ಎಂ.ಬಿ.ಎ. ಅಧ್ಯಯನ ವಿಭಾಗ)

ನಿರ್ಣಯ: ವಿಶ್ವವಿದ್ಯಾಲಯದಲ್ಲಿ ಹಿರಿಯ ಸಹಾಯಕರಾಗಿ ಕರ್ತವ್ಯ ನಿರ್ವಹಿಸಿ ನಿವೃತ್ತರಾಗಿರುವ ಶ್ರೀ ಸೋಮಶೇಖರ ಪಿ.ಸಿ., ಶಂಕರಘಟ್ಟ ಇವರು "ಸೋಮಶೇಖರ ಪಿ.ಸಿ. ಬಿನ್ ಪರಶುರಾಮಪ್ಪ ಬಿ.ಹೆಚ್., ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ" ಹೆಸರಿನಲ್ಲಿ 2025–26ನೇ (35ನೇ ಘಟಿಕೋತ್ಸವದಿಂದ) ಶೈಕ್ಷಣಿಕ ಸಾಲಿನಿಂದ ಸ್ನಾತಕೋತ್ತರ ವ್ಯವಹಾರ ನಿರ್ವಹಣಾಶಾಸ್ತ್ರ (ಎಂ.ಬಿ.ಎ.) ವಿಷಯದಲ್ಲಿ ಪ್ರಥಮ ರ್‍ಯಾಂಕ್ ಪಡೆದ ವಿದ್ಯಾರ್ಥಿ/ವಿದ್ಯಾರ್ಥಿನಿಗೆ ದತ್ತಿನಿಧಿ ನಗದು ಬಹುಮಾನ ನೀಡುವ ಸಂಬಂಧ ರೂ.25,000/–ಗಳ ದತ್ತಿನಿಧಿ ಸ್ಥಾಪಿಸಲು ಮತ್ತು ಸದರಿ ದತ್ತಿನಿಧಿ ಮೊಬಲಗಿನಿಂದ ಬರುವ ಬಡ್ಡಿಯ ಹಣವನ್ನು ನಗದು ಬಹುಮಾನವಾಗಿ ನೀಡಲು ಸಭೆಯು ಸರ್ವಾನುಮತದಿಂದ ಅನುಮೋದಿಸಿತು ಮತ್ತು ದತ್ತಿನಿಧಿ ದಾನಿಗಳನ್ನು ಅಭಿನಂದಿಸಿತು.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

2025:ಎಸಿ–4.17: ಶ್ರೀ ಸೋಮಶೇಖರ್ ಪಿ.ಸಿ. ಬಿನ್. ಪರಶುರಾಮಪ್ಪ ಬಿ.ಹೆಚ್., ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ ದತ್ತಿನಿಧಿ ನಗದು ಬಹುಮಾನ ಸ್ಥಾಪನೆ ಬಗ್ಗೆ. (ಸ್ನಾತಕೋತ್ತರ ಭೌತಶಾಸ್ತ್ರ ಅಧ್ಯಯನ ವಿಭಾಗ)

ನಿರ್ಣಯ: ವಿಶ್ವವಿದ್ಯಾಲಯದಲ್ಲಿ ಹಿರಿಯ ಸಹಾಯಕರಾಗಿ ಕರ್ತವ್ಯ ನಿರ್ವಹಿಸಿ ನಿವೃತ್ತರಾಗಿರುವ ಶ್ರೀ ಸೋಮಶೇಖರ ಪಿ.ಸಿ., ಶಂಕರಘಟ್ಟ ಇವರು "ಸೋಮಶೇಖರ ಪಿ.ಸಿ. ಬಿನ್ ಪರಶುರಾಮಪ್ಪ, ಬಿ.ಹೆಚ್., ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ" ಹೆಸರಿನಲ್ಲಿ 2025–26ನೇ (35ನೇ ಘಟಿಕೋತ್ಸವದಿಂದ) ಶೈಕ್ಷಣಿಕ ಸಾಲಿನಿಂದ ಸ್ನಾತಕೋತ್ತರ ಭೌತಶಾಸ್ತ್ರ ಅಧ್ಯಯನ ವಿಷಯದಲ್ಲಿ ಪ್ರಥಮ ರ್‍ಯಾಂಕ್ ಪಡೆದ ವಿದ್ಯಾರ್ಥಿ/ವಿದ್ಯಾರ್ಥಿನಿಗೆ ದತ್ತಿನಿಧಿ ನಗದು ಬಹುಮಾನ ನೀಡುವ ಸಲುವಾಗಿ ರೂ.25,000/–ಗಳ ದತ್ತಿನಿಧಿ ಸ್ಥಾಪಿಸಲು ಮತ್ತು ಸದರಿ ದತ್ತಿನಿಧಿ ಮೊಬಲಗಿನಿಂದ ಬರುವ ಬಡ್ಡಿಯ ಹಣವನ್ನು ನಗದು ಬಹುಮಾನವಾಗಿ ನೀಡಲು ಸಭೆಯು ಸರ್ವಾನುಮತದಿಂದ ಅನುಮೋದಿಸಿತು ಮತ್ತು ದತ್ತಿನಿಧಿ ದಾನಿಗಳನ್ನು ಅಭಿನಂದಿಸಿತು.

2025:ಎಸಿ–4.18: ಶ್ರೀ ಸೋಮಶೇಖರ್ ಪಿ.ಸಿ. ಬಿನ್. ಪರಶುರಾಮಪ್ಪ ಬಿ.ಹೆಚ್., ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ ದತ್ತಿನಿಧಿ ನಗದು ಬಹುಮಾನ ಸ್ಥಾಪನೆ ಬಗ್ಗೆ. (ಸ್ನಾತಕೋತ್ತರ ಕನ್ನಡ ಭಾರತಿ ಅಧ್ಯಯನ ವಿಭಾಗ)

ನಿರ್ಣಯ: ವಿಶ್ವವಿದ್ಯಾಲಯದಲ್ಲಿ ಹಿರಿಯ ಸಹಾಯಕರಾಗಿ ಕರ್ತವ್ಯ ನಿರ್ವಹಿಸಿ ನಿವೃತ್ತರಾಗಿರುವ ಶ್ರೀ ಸೋಮಶೇಖರ ಪಿ.ಸಿ., ಶಂಕರಘಟ್ಟ ಇವರು "ಸೋಮಶೇಖರ ಪಿ.ಸಿ. ಬಿನ್ ಪರಶುರಾಮಪ್ಪ, ಬಿ.ಹೆಚ್., ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ" ಹೆಸರಿನಲ್ಲಿ 2025–26ನೇ (35ನೇ ಘಟಿಕೋತ್ಸವದಿಂದ) ಶೈಕ್ಷಣಿಕ ಸಾಲಿನಿಂದ ಸ್ನಾತಕೋತ್ತರ ಕನ್ನಡ ಅಧ್ಯಯನ ವಿಷಯದಲ್ಲಿ ಪ್ರಥಮ ರ್‍ಯಾಂಕ್ ಪಡೆದ ವಿದ್ಯಾರ್ಥಿ/ವಿದ್ಯಾರ್ಥಿನಿಗೆ ದತ್ತಿನಿಧಿ ನಗದು ಬಹುಮಾನ ನೀಡುವ ಸಂಬಂಧ ರೂ.25,000/–ಗಳ ದತ್ತಿನಿಧಿ ಸ್ಥಾಪಿಸಲು ಮತ್ತು ಸದರಿ ದತ್ತಿನಿಧಿ ಮೊಬಲಗಿನಿಂದ ಬರುವ ಬಡ್ಡಿಯ ಹಣವನ್ನು ನಗದು ಬಹುಮಾನವಾಗಿ ನೀಡಲು ಸಭೆಯು ಸರ್ವಾನುಮತದಿಂದ ಅನುಮೋದಿಸಿತು ಮತ್ತು ದತ್ತಿನಿಧಿ ದಾನಿಗಳನ್ನು ಅಭಿನಂದಿಸಿತು.

2025:ಎಸಿ–4.19: "Smt. Sundramma Venkataramaiah Gold Medal" ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕ ಸ್ಥಾಪನೆ ಬಗ್ಗೆ.

ನಿರ್ಣಯ: ದತ್ತಿನಿಧಿ ಸ್ವರ್ಣಪದಕ ದಾನಿಗಳಾದ ಶ್ರೀ ವಿ.ಜಿ. ಪ್ರಸಾದ್ ಬಿನ್ ಪ್ರೊ.ಪಿ.ವೆಂಕಟರಾಮಯ್ಯ, ಕುವೆಂಪುನಗರ, ಮೈಸೂರು ಇವರು "Smt. Sundramma Venkataramaiah Gold Medal" ಹೆಸರಿನಲ್ಲಿ 2024–25ನೇ (35ನೇ ಘಟಿಕೋತ್ಸವ) ಶೈಕ್ಷಣಿಕ ಸಾಲಿನಿಂದ ಕುವೆಂಪು ವಿಶ್ವವಿದ್ಯಾಲಯದ ಸ್ನಾತಕೋತ್ತರ ಭೌತಶಾಸ್ತ್ರ ಅಧ್ಯಯನ ವಿಷಯದಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿನಿಗೆ (ಮಹಿಳಾ ವಿದ್ಯಾರ್ಥಿ) ದತ್ತಿನಿಧಿ ಸ್ವರ್ಣ ಪದಕ ನೀಡಲು ಅನುಮೋದನೆ ನೀಡಿದ ಸಭೆಯು ಪದಕದ ದಾನಿಗಳನ್ನು ಅಭಿನಂದಿಸಿತು. **(ಸ್ನಾತಕೋತ್ತರ ಕೋರ್ಸ್‌ನಲ್ಲಿ ಒಂದು ವೇಳೆ ಇಬ್ಬರು ವಿದ್ಯಾರ್ಥಿನಿಯರ ಅಂಕ ಒಂದೇ ಆಗಿದ್ದಲ್ಲಿ ಬಿ.ಎಸ್ಸಿ. ಪದವಿಯಲ್ಲಿ ಯಾರೂ ಅತಿ ಹೆಚ್ಚು ಅಂಕ ಪಡೆದಿರುತ್ತಾರೆ ಅಂತಹ ವಿದ್ಯಾರ್ಥಿನಿಯನ್ನು ಪರಿಗಣಿಸಬೇಕು)**

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

2025:ಎಸಿ–4.20: "Prof V. Krishna Gold Medal" ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕ ಸ್ಥಾಪನೆ ಬಗ್ಗೆ.

ನಿರ್ಣಯ: ದಾನಿಗಳಾದ Research Scholars of Prof. V. Krishna, Dept. of Biotechnology, Kuvempu University ಇವರು ಕುವೆಂಪು ವಿಶ್ವವಿದ್ಯಾಲಯದ ಸ್ನಾತಕೋತ್ತರ ಜೈವಿಕತಂತ್ರಜ್ಞಾನ ವಿಷಯದಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗೆ "Prof. V. Krishna Gold Medal" ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕವನ್ನು ವಿಶ್ವವಿದ್ಯಾಲಯದ 35ನೇ ವಾರ್ಷಿಕ ಘಟಿಕೋತ್ಸವದಿಂದ ನೀಡಲು ಅನುಮೋದನೆ ನೀಡಿದ ಸಭೆಯು ಪದಕದ ದಾನಿಗಳನ್ನು ಸರ್ವಾನುಮತದಿಂದ ಅಭಿನಂದಿಸಿತು.

2025:ಎಸಿ–4.21: "Prof. H.S. Bhojya Naik – Industrial Chemistry Gold Medal" ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕ ಸ್ಥಾಪನೆ ಬಗ್ಗೆ.

ನಿರ್ಣಯ: ದತ್ತಿನಿಧಿ ಸ್ವರ್ಣಪದಕ ದಾನಿಗಳಾದ Prof. H.S. Bhojya Naik Research Group, Department of Industrial Chemistry, Kuvempu University, Shankaraghatta – ಇವರು "Prof. H.S. Bhojya Naik - Industrial Chemistry Gold Medal" ಹೆಸರಿನಲ್ಲಿ 2024–25ನೇ (35ನೇ ಘಟಿಕೋತ್ಸವ) ಶೈಕ್ಷಣಿಕ ಸಾಲಿನಿಂದ ಕುವೆಂಪು ವಿಶ್ವವಿದ್ಯಾಲಯದ ಸ್ನಾತಕೋತ್ತರ ಔದ್ಯೋಗಿಕ ರಸಾಯನಶಾಸ್ತ್ರ ಅಧ್ಯಯನ ವಿಷಯದಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿ/ವಿದ್ಯಾರ್ಥಿನಿಗೆ ದತ್ತಿನಿಧಿ ಸ್ವರ್ಣ ಪದಕ ನೀಡಲು ಅನುಮೋದನೆ ನೀಡಿದ ಸಭೆಯು ಪದಕದ ದಾನಿಗಳನ್ನು ಅಭಿನಂದಿಸಿತು.

2025:ಎಸಿ–4.22: "Dr. Gowdagere Narayana Rao Gold Medal" ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕ ಸ್ಥಾಪನೆ ಬಗ್ಗೆ.

ನಿರ್ಣಯ: ದತ್ತಿನಿಧಿ ಸ್ವರ್ಣಪದಕ ದಾನಿಗಳಾದ ಶ್ರೀಮತಿ ಎಂ.ಎನ್.ಗೀತಾ ಬಿನ್ ಡಾ.ಜಿ.ನಾರಾಯಣರಾವ್, ಶರಾವತಿನಗರ, ಶಿವಮೊಗ್ಗ – ಇವರು "Dr. Gowdagere Narayana Rao Gold Medal" ಹೆಸರಿನಲ್ಲಿ 2024–25ನೇ (35ನೇ ಘಟಿಕೋತ್ಸವ) ಶೈಕ್ಷಣಿಕ ಸಾಲಿನಿಂದ ಕುವೆಂಪು ವಿಶ್ವವಿದ್ಯಾಲಯದ ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ವಿಷಯದಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿ/ವಿದ್ಯಾರ್ಥಿನಿಗೆ ದತ್ತಿನಿಧಿ ಸ್ವರ್ಣ ಪದಕ ನೀಡಲು ಅನುಮೋದನೆ ನೀಡಿದ ಸಭೆಯು ಪದಕದ ದಾನಿಗಳನ್ನು ಅಭಿನಂದಿಸಿತು.

2025:ಎಸಿ–4.23: "Prof A.N. Rajeshwara – Biochemistry Gold Medal" ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕ ಸ್ಥಾಪನೆ ಬಗ್ಗೆ.

ನಿರ್ಣಯ: ದತ್ತಿನಿಧಿ ಸ್ವರ್ಣಪದಕ ದಾನಿಗಳಾದ Research Alumni of Prof. A. N. Rajeshwara, Dept. of Biochemistry, Kuvempu University ಇವರು "Prof. A. N. Rajeshwara - Biochemistry Gold Medal" ಹೆಸರಿನಲ್ಲಿ 2024–25ನೇ ಶೈಕ್ಷಣಿಕ ಸಾಲಿನಿಂದ ಕುವೆಂಪು ವಿಶ್ವವಿದ್ಯಾಲಯದ ಸ್ನಾತಕೋತ್ತರ ಜೀವರಸಾಯನಶಾಸ್ತ್ರ ಅಧ್ಯಯನ ವಿಷಯದಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿ/ವಿದ್ಯಾರ್ಥಿನಿಗೆ ದತ್ತಿನಿಧಿ ಸ್ವರ್ಣ ಪದಕ ನೀಡಲು ಅನುಮೋದನೆ ನೀಡಿದ ಸಭೆಯು ಪದಕದ ದಾನಿಗಳನ್ನು ಅಭಿನಂದಿಸಿತು.

2025:ಎಸಿ–4.24: "Family members of Prof. A.N. Rajeshwara and Soumyarani Rajeshwara Achur, Lokanathpura, Koppa Taluk Gold Medal" ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕ ಸ್ಥಾಪನೆ ಬಗ್ಗೆ.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ನಿರ್ಣಯ: ದತ್ತಿನಿಧಿ ಸ್ವರ್ಣಪದಕ ದಾನಿಗಳಾದ Prof. A. N. Rajeshwara, Dept. of Biochemistry, Kuvempu University, Shankarghatta, Shivamogga – ಇವರು "Family members of Prof. A. N. Rajeshwara and Soumyarani Rajeshwara, Achur, Lokanathpura, Koppa Taluk Gold Medal" ಹೆಸರಿನಲ್ಲಿ 2025–26ನೇ (36ನೇ ಘಟಿಕೋತ್ಸವ) ಶೈಕ್ಷಣಿಕ ಸಾಲಿನಿಂದ ಕುವೆಂಪು ವಿಶ್ವವಿದ್ಯಾಲಯದ ಸ್ನಾತಕೋತ್ತರ ಜೀವರಸಾಯನಶಾಸ್ತ್ರ ಅಧ್ಯಯನ ವಿಷಯದಲ್ಲಿ ದ್ವಿತೀಯ ರ್‍ಯಾಂಕ್ ಪಡೆದ ವಿದ್ಯಾರ್ಥಿ/ವಿದ್ಯಾರ್ಥಿನಿಗೆ ದತ್ತಿನಿಧಿ ಸ್ವರ್ಣಪದಕ ನೀಡಲು ಅನುಮೋದನೆ ನೀಡಿದ ಸಭೆಯು ಪದಕದ ದಾನಿಗಳನ್ನು ಅಭಿನಂದಿಸಿತು.

**2025:ಎಸಿ–4.25:** Non-NEP ಅವಧಿ ಪೂರ್ಣಗೊಳಿಸಿದ (Double the Duration) ಸ್ನಾತಕ/ಸ್ನಾತಕೋತ್ತರ ರೆಗ್ಯೂಲರ್ ಪದವಿ ವಿದ್ಯಾರ್ಥಿಗಳಿಗೆ ವಿಶೇಷ ಸಂದರ್ಭವೆಂದು ಪರಿಗಣಿಸಿ ಪರೀಕ್ಷೆಗೆ ಅವಕಾಶ ನೀಡುವ ಕುರಿತು.

ಕುಲಸಚಿವ (ಮೌಲ್ಯಮಾಪನ)ರವರು ವಿಷಯ ಮಂಡಿಸಿ ಮಾತನಾಡುತ್ತಾ, ದ್ವಿಗುಣ ಅವಧಿ ಮುಗಿದಿರುವ ಹಾಗೂ ಕೆಲವು ವಿಷಯಗಳಲ್ಲಿ ಅನುತ್ತೀರ್ಣರಾಗಿರುವ Non-NEP ವಿದ್ಯಾರ್ಥಿಗಳಿಗೆ ಆಗಸ್ಟ್/ಸೆಪ್ಟಂಬರ್–2025ರಲ್ಲಿ ಪರೀಕ್ಷೆ ಬರೆಯಲು ಇನ್ನೊಂದು ಅವಕಾಶ ನೀಡಲು ಅನುಮೋದನೆಗಾಗಿ ದಿನಾಂಕ:25–04–2025 ರಂದು ನಡೆದ ವಿದ್ಯಾವಿಷಯಕ ಪರಿಷತ್ತಿನ ಸಭೆಗೆ ಮಂಡಿಸಲಾಗಿತ್ತು. ಸಭೆಯು ಅವಕಾಶ ನೀಡಲು ಅನುಮೋದನೆ ನೀಡಿರಲಿಲ್ಲ. ಆದರೆ, ದಿನಾಂಕ:12–08–2025ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳ ಸಂಖ್ಯೆ:2025–ಸಿಂ–5.23(ಎಫ್–1):ರಲ್ಲಿ "ಚರ್ಚೆಯ ನಂತರ 2015ರ ನಂತರದಲ್ಲಿ ದ್ವಿಗುಣ ಅವಧಿ ಮುಗಿದಿರುವ ಸ್ನಾತಕ ವಿದ್ಯಾರ್ಥಿಗಳಿಗೆ ವಿಶೇಷ ಶುಲ್ಕದೊಂದಿಗೆ ಪರೀಕ್ಷೆ ಬರೆಯಲು ಅವಕಾಶ ನೀಡಲು ನಿರ್ಣಯಿಸಿದ ಸಭೆಯು, ಸದರಿ ವಿದ್ಯಾರ್ಥಿಗಳಿಗೆ ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನಲ್ಲಿಯೇ ಪರೀಕ್ಷೆ ಬರೆಯಬೇಕೆಂಬುದನ್ನು ಅನುಮೋದಿಸಿತು" ಎಂದು ನಿರ್ಣಯವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಅನುಮೋದನೆಗಾಗಿ ವಿದ್ಯಾವಿಷಯಕ ಪರಿಷತ್ತಿನ ಸಭೆಗೆ ಮಂಡಿಸಿದೆ ಎಂದರು.

ಡಾ.ಜಿ.ಪ್ರಶಾಂತನಾಯಕರವರು ಮಾತನಾಡಿ, ದ್ವಿಗುಣ ಅವಧಿ ಮುಗಿದ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅವಕಾಶ ನೀಡಬಾರದೆಂದು ಹಿಂದಿನ ವಿದ್ಯಾವಿಷಯಕ ಪರಿಷತ್ತಿನ ಸಭೆಯಲ್ಲಿ ಚರ್ಚಿಸಿ, ಕಾರಣಗಳನ್ನು ವಿವರಿಸಿ ಅವಕಾಶ ನೀಡುವುದು ಬೇಡವೆಂದು ನಿರ್ಣಯಿಸಲಾಗಿತ್ತು. ಸದರಿ ವಿದ್ಯಾರ್ಥಿಗಳಿಗೆ ಈ ಹಿಂದೆ ಪ್ರತಿ ವರ್ಷವೂ ಅವಕಾಶ ನೀಡಲಾಗುತ್ತಿತ್ತು. ಅವರು ಇದನ್ನು ಗಂಭೀರವಾಗಿ ಪರಿಗಣಿಸದೇ ಅನುತ್ತೀರ್ಣರಾಗುತ್ತಿದ್ದು, ಇದೇ ರೀತಿ ಅವಕಾಶ ನೀಡುತ್ತಿದ್ದರೆ ಇದಕ್ಕೆ ಕೊನೆ ಇರುವುದಿಲ್ಲ. ಅವರಿಗೆ ಪರೀಕ್ಷೆ ಬರೆಯಲು ಅವಕಾಶ ನೀಡುವುದು ಬೇಡವೆಂದು ಈ ಹಿಂದೆ ನಿರ್ಣಯವಾಗಿದ್ದು, ಮತ್ತೆ ಅದನ್ನು ಬದಲಿಸುವುದು ಬೇಡವೆಂದರು. ಪ್ರೊ.ಆರ್.ಹಿರೇಮಣಿನಾಯ್ಕರವರು ಮಾತನಾಡಿ, ತುಂಬಾ ಹಳೆಯ ವಿದ್ಯಾರ್ಥಿಗಳಿಗೆ ಬೇಡ, ಇತ್ತೀಚಿನ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅವಕಾಶ ಕೊಡಬಹುದು. ಇದರಿಂದ ಹಳೆಯ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ ಎಂದರು. ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ, ಮೊದಲು ವಾರ್ಷಿಕ ಪರೀಕ್ಷೆಗಳಿದ್ದವು. ನಂತರ ಸೆಮಿಸ್ಟರ್ ಪದ್ಧತಿ ಬಂದಿತು. ಈಗ NEP/SEP ಗಳು ಬಂದಿವೆ. ಈ ಬದಲಾವಣೆಗಳಿಂದ ಹಳೆಯ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ರಾಜ್ಯದ ಕೆಲವು ವಿಶ್ವವಿದ್ಯಾಲಯಗಳಲ್ಲಿ ಅನುಮತಿ ನೀಡಿದ್ದಾರೆ. ನಾವೂ ನೀಡಿದಲ್ಲಿ ವಿದ್ಯಾರ್ಥಿಗಳಿಗೆ ಒಳ್ಳೆಯದಾಗುತ್ತದೆ ಎಂದರು. ಡಾ. ಕೆ. ಯೋಗೇಂದ್ರ ರವರು ಮಾತನಾಡಿ, ದ್ವಿಗುಣ ಅವಧಿ ಮುಗಿದು, ಕೆಲವು ವಿಷಯಗಳು ಬಾಕಿ ಇರುವ ವಿದ್ಯಾರ್ಥಿಗಳ ಸಂಖ್ಯೆ ಬಹಳ ಕಡಿಮೆ ಇರುತ್ತದೆ. ಇವರಿಗಾಗಿಯೇ ಪ್ರತ್ಯೇಕವಾದ ಪ್ರಶ್ನೆಪತ್ರಿಕೆ ಸಿದ್ಧಪಡಿಸಬೇಕಾಗುತ್ತದೆ. ಪ್ರತ್ಯೇಕ ಪರೀಕ್ಷಾ ಕೇಂದ್ರ ಸೇರಿದಂತೆ ವೆಚ್ಚಗಳು ಹೆಚ್ಚಾಗುತ್ತವೆ ಎಂದರು.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

ನಿರ್ಣಯ: ಸುದೀರ್ಘ ಚರ್ಚೆಯ ನಂತರ ದ್ವಿಗುಣ ಅವಧಿ (Double the Duration) ಪೂರ್ಣಗೊಳಿಸಿದ Non-NEP ಸ್ನಾತಕ/ಸ್ನಾತಕೋತ್ತರ ರೆಗ್ಯೂಲರ್ ಪದವಿ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅವಕಾಶ ನೀಡದಿರಲು ಸಭೆಯು ನಿರ್ಣಯಿಸಿತು.

ಸದಸ್ಯರು ಮಂಡಿಸಿರುವ ಪ್ರಸ್ತಾವನೆಗಳು

ಯಾವುದೂ ಇಲ್ಲ

**2025:ಎಸಿ–4.26:** ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು

**2025:ಎಸಿ–4.26(1):** ಕಲಾ ನಿಕಾಯದ ಡೀನರಾದ ಪ್ರೊ.ಚಂದ್ರಶೇಖರ್ ಎಸ್. ರವರು ಮಾತನಾಡಿ, ಹಲವಾರು ವ್ಯಕ್ತಿಗಳು ವಿಶ್ವವಿದ್ಯಾಲಯದಲ್ಲಿ ಸ್ವರ್ಣಪದಕ, ನಗದು ಬಹುಮಾನ ಮತ್ತು ದತ್ತಿ ಉಪನ್ಯಾಸಗಳನ್ನು ಸ್ಥಾಪಿಸುತ್ತಿದ್ದಾರೆ. ಇದು ನಮಗೆ ಹೆಮ್ಮೆಯ ವಿಷಯವಾಗಿದ್ದು, ಸಂಬಂಧಪಟ್ಟ ದತ್ತಿನಿಧಿಯ ದಾನಿಗಳನ್ನು ಮುಂದಿನ ವಿದ್ಯಾವಿಷಯಕ ಪರಿಷತ್ತಿನ ಸಭೆಗೆ ಆಹ್ವಾನಿಸಿ ಅವರನ್ನು ಅಭಿನಂದನಾ ಪತ್ರದೊಂದಿಗೆ ಸನ್ಮಾನಿಸುವ ಮೂಲಕ ಗೌರವಿಸಬೇಕು ಎಂದರು. ಎಲ್ಲಾ ಸದಸ್ಯರು ಇದಕ್ಕೆ ಧ್ವನಿಗೂಡಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ದಿನಾಂಕ:12–08–2025ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಕೂಡ ಈ ಬಗ್ಗೆ ಚರ್ಚೆ ಮತ್ತು ನಿರ್ಣಯವಾಗಿದ್ದು, ಇದನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

**2025:ಎಸಿ–4.26(2):** ಡಾ. ಶಿವಕುಮಾರ್ ಜಿ.ಎಸ್‌ರವರು ಮಾತನಾಡಿ, ಬಿ.ಇಡಿ. ಕೋರ್ಸ್‌ಗಳಲ್ಲಿ N.C.T.E ಬದಲಾವಣೆಗಳನ್ನು ಮಾಡಿದೆ. ಇದರ ಪ್ರಕಾರ Stand alone College ವ್ಯವಸ್ಥೆಯು 2030ಕ್ಕೆ ಕೊನೆಗೊಳ್ಳಲಿದೆ. ನಂತರ Integrated College ಮಾಡಬೇಕಾಗಿದೆ. ಇದಕ್ಕೆ ಕೆಲವು ಕಂಡೀಷನ್‌ಗಳಿವೆ. ನಾಲ್ಕು ವರ್ಷಗಳ ಪದವಿಯೊಂದಿಗೆ ಬಿ.ಇಡಿ. ಕೂಡ ಆಗಬೇಕು. ಬಿ.ಇಡಿ. ಕಾಲೇಜುಗಳಿಗೆ ಈ ಬಗ್ಗೆ ಗೊಂದಲ ಇದೆ ಎಂದರು.

ಮಾನ್ಯ ಕುಲಪತಿಯವರು ಮಾತನಾಡಿ, Integrated B.Ed. ಉತ್ತಮ ವ್ಯವಸ್ಥೆ. 04 ವರ್ಷಗಳ ಇಂಟಿಗ್ರೇಟೆಡ್ ಕೋರ್ಸ್ ಮಾಡಿದವರಿಗೆ ಪಿ.ಜಿ. ಒಂದು ವರ್ಷ ಮಾತ್ರ ಆಗುತ್ತದೆ. ಬಿ.ಇಡಿ. ಕಾಲೇಜಿನವರು ಈ ವ್ಯವಸ್ಥೆಗೆ ಈಗಿನಂದಲೇ ಸಿದ್ಧತೆ ಮಾಡಿಕೊಳ್ಳುವುದು ಒಳಿತು ಎಂದರು.

**2025:ಎಸಿ–4.26(3):** ಡಾ. ಜಿ.ಎಂ.ಗಣೇಶರವರು ಮಾತನಾಡುತ್ತಾ, ವಿಶ್ವವಿದ್ಯಾಲಯವು ಪ್ರಸ್ತುತ ಡಿಜಿಟಲ್ ಮೌಲ್ಯಮಾಪನ ವ್ಯವಸ್ಥೆಯನ್ನು ಜಾರಿಗೊಳಿಸಿದೆ. ಈ ಮೊದಲು ನಿಗದಿಪಡಿಸಿದ ಕೇಂದ್ರಗಳಲ್ಲಿಯೇ ಮೌಲ್ಯಮಾಪನ ಕಾರ್ಯ ನಡೆಯುತ್ತಿತ್ತು. ಈಗ ಮೌಲ್ಯಮಾಪಕರು ಇರುವ ಸ್ಥಳದಲ್ಲಿಯೇ 24X7 ಗಂಟೆಗಳ ಅವಧಿಯಲ್ಲಿ ಮಾಲ್ಯಮಾಪನ ಮಾಡಲು ಅವಕಾಶವಿದೆ. ಪಾಸ್‌ವರ್ಡ್ ನೀಡಿದರೆ ಯಾರು ಬೇಕಾದರೂ ಮೌಲ್ಯಮಾಪನ ಮಾಡಬಹುದಾಗಿದೆ. ಇದರಿಂದ ವಿಶ್ವವಿದ್ಯಾಲಯದ ಘನತೆಗೆ ಚ್ಯುತಿ ಬರುತ್ತದೆ. ಆದುದರಿಂದ, ಮೌಲ್ಯಮಾಪನ ಕೇಂದ್ರಗಳನ್ನು ತೆರೆದು, ನಿಗದಿತ ಅವಧಿಯಲ್ಲಿಯೇ ಮೌಲ್ಯಮಾಪನ ಮಾಡುವಂತಾದರೆ ಒಳ್ಳೆಯದಾಗುತ್ತದೆ. ಸ್ನಾತಕ ಉತ್ತರ ಪತ್ರಿಕೆಗಳ ಮರು ಮೌಲ್ಯಮಾಪನವನ್ನು ಡಿಜಿಟಲ್ ಬದಲು ಮ್ಯಾನ್ಯುಯಲ್ ಆಗಿ ಮಾಡಿಸುವುದು ಉತ್ತಮ ಎಂದರು.

ಡಾ.ರಾಕೇಶ್ ಎಸ್.ಪಿ.ರವರು ಮಾತನಾಡಿ, ಡಿಜಿಟಲ್ ಮೌಲ್ಯಮಾಪನದಲ್ಲಿ ಅಂಕಗಳು ನೇರವಾಗಿ U.U.C.M.S ನಲ್ಲಿ Entry ಆಗುವುದಿಲ್ಲ. ಮೌಲ್ಯಮಾಪನ ಮಾಡಿದವರ ಸಹಿ ಇರುವುದಿಲ್ಲ. ಆದುದರಿಂದ, ಮೌಲ್ಯಮಾಪಕರ ಡಿಜಿಟಲ್ ಸಹಿಯಾದರೂ ಬರುವಂತಾಗಬೇಕು



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

ಎಂದರು. ಡಾ. ಜಿ.ಎಂ. ಗಣೇಶ್‌ರವರು ಮಾತನಾಡಿ, ಒಂದು ಮೌಲ್ಯಮಾಪನ ಕೇಂದ್ರ ಮಾಡಿ, Thumb impression ಬರುವಂತೆ ಮಾಡಬೇಕು ಎಂದರು. ಡಾ.ಜಿ. ಪ್ರಶಾಂತನಾಯಕರವರು ಮಾತನಾಡಿ, ಡಿಜಿಟಲ್ ವ್ಯವಸ್ಥೆಯಲ್ಲಿ ಪ್ರತಿ ಉತ್ತರಪತ್ರಿಕೆಗೆ ರೂ.55/–ಗಳು ವೆಚ್ಚವಾಗುತ್ತಿದ್ದು, ಸ್ಕ್ಯಾನಿಂಗ್ ಗುಣಮಟ್ಟ ಉತ್ತಮವಾಗಿಲ್ಲ. ಕೆಲವು ಪುಟಗಳಲ್ಲಿ ಅಕ್ಷರಗಳು ಸ್ಪಷ್ಟವಾಗಿ ಕಾಣಿಸುವುದಿಲ್ಲ. ಡಿಜಿಟಲ್ ಮೌಲ್ಯಮಾಪನ ವ್ಯವಸ್ಥೆಯಲ್ಲಿ ಹಲವಾರು ಸಮಸ್ಯೆಗಳಿವೆ. ಇದರಿಂದ ಆರ್ಥಿಕವಾಗಿ ಉಳಿತಾಯವಾಗುವುದಿಲ್ಲ ಎನ್ನುವುದಾದರೆ ಇದನ್ನು ಮರುಪರಿಶೀಲಿಸುವ ಅಗತ್ಯವಿದೆ. ಸ್ನಾತಕೋತ್ತರ ವಿಭಾಗಗಳ ಅಧ್ಯಾಪಕರು ಕ್ಯಾಂಪಸ್‌ನಲ್ಲಿಯೇ ಇರುವುದರಿಂದ ಡಿಜಿಟಲ್ ಮೌಲ್ಯಮಾಪನದ ಬದಲು ಮ್ಯಾನ್ಯುಯಲ್ ಆಗಿಯೇ ಮೌಲ್ಯಮಾಪನ ಮಾಡಬಹುದು ಎಂದರು. ಡಾ.ಕೆ. ಯೋಗೇಂದ್ರರವರು ಮಾತನಾಡಿ, ಯಾವುದೇ ವ್ಯವಸ್ಥೆಯನ್ನು ಅಳವಡಿಸಿಕೊಂಡರೂ ಕೂಡ, ಅದರ ಸರಿಯಾದ ನಿರ್ವಹಣೆ ಮುಖ್ಯ. ಅಧ್ಯಾಪಕರು ಎಲ್ಲಿಯೇ ಮೌಲ್ಯಮಾಪನ ಮಾಡಿದರೂ, ಅದರ ಪಾವಿತ್ರತೆ ಕಾಪಾಡುವುದು ಅಗತ್ಯ ಎಂದರು.

ಮಾನ್ಯ ಕುಲಪತಿಯವರು ಮಾತನಾಡಿ, ನಮಗೆ ವಿದ್ಯಾರ್ಥಿಗಳ ಹಿತಾಸಕ್ತಿ ಮುಖ್ಯ. ಡಿಜಿಟಲ್ ಮೌಲ್ಯಮಾಪನದಿಂದ ಅನುಕೂಲವಾಗುತ್ತದೆ ಎಂಬ ಉದ್ದೇಶದಿಂದ ಜಾರಿಗೊಳಿಸಲಾಯಿತು. ಆದರೆ, ಇದರಲ್ಲಿ ಹಲವಾರು ತೊಂದರೆಗಳು ವರದಿಯಾಗುತ್ತಿವೆ. ಯಾವುದೇ ವ್ಯವಸ್ಥೆ ಸರಿಯಿಲ್ಲ, ಅದರಿಂದ ತೊಂದರೆಯಾಗುತ್ತದೆ ಎಂದಾದರೆ ಅದನ್ನು ಬದಲಾಯಿಸಬಹುದಾಗಿದೆ. ಪರೀಕ್ಷೆಯಲ್ಲಿ ಪಾರದರ್ಶಕತೆ, ನ್ಯಾಯಯುತವಾದ ಮೌಲ್ಯಮಾಪನ ಮುಂತಾದ ವಿದ್ಯಾರ್ಥಿ ಸ್ನೇಹಿ ಕ್ರಮಗಳ ಕುರಿತಾಗಿ ಯೋಚಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಡಿಜಿಟಲ್ ಮೌಲ್ಯಮಾಪನ ವ್ಯವಸ್ಥೆಯನ್ನು ಸಮಗ್ರವಾಗಿ ಪರಿಶೀಲಿಸಿ, ಇದರಿಂದಾಗುತ್ತಿರುವ ಖರ್ಚುವೆಚ್ಚಗಳು ಮತ್ತು ಉಳಿತಾಯಗಳ ಬಗ್ಗೆ Financial Analysis ಕೂಡ ಮಾಡಿಕೊಂಡು, ಮುಂದುವರಿಸುವ ಬಗ್ಗೆ ಅಥವಾ ಪರ್ಯಾಯ ವ್ಯವಸ್ಥೆಯ ಕುರಿತು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

**2025:ಎಸಿ–4.26(4):** **ಡಾ.ಸಂಧ್ಯಾ ಕಾವೇರಿರವರು ಮಾತನಾಡುತ್ತಾ,** ಇತ್ತೀಚೆಗೆ ಪ್ರಕಟವಾದ ಬಿ.ಸಿ.ಎ. ಪದವಿಯ 2ನೇ ಸೆಮಿಸ್ಟರ್ ಫಲಿತಾಂಶದಲ್ಲಿ ಬಹಳಷ್ಟು ವ್ಯತ್ಯಾಸಗಳಾಗಿದ್ದು, ಇದರಿಂದ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತದೆ. ಅಲ್ಲದೇ, ಮರುಮೌಲ್ಯಮಾಪನದ ಫಲಿತಾಂಶಗಳು ಸರಿಯಾದ ಸಮಯದಲ್ಲಿ ಬರುತ್ತಿಲ್ಲ. ಮುಂದಿನ ಪರೀಕ್ಷೆಯ ಸಮಯದಲ್ಲಿ ಬರುತ್ತಿದ್ದು, ವಿದ್ಯಾರ್ಥಿಗಳು ಪರೀಕ್ಷೆ ತೆಗೆದುಕೊಳ್ಳಬೇಕೇ ಅಥವಾ ಬೇಡವೇ ಎಂಬ ಗೊಂದಲದಲ್ಲಿದ್ದಾರೆ. ಇತ್ತೀಚೆಗೆ ರ್‍ಯಾಂಕ್‌ಪಟ್ಟಿ ಪ್ರಕಟವಾಗುವುದು ಕೂಡ ವಿಳಂಬವಾಗುತ್ತಿದ್ದು, ಆದಷ್ಟು ಬೇಗನೆ ಪ್ರಕಟಿಸಿ ಎಂದರು. ಡಾ. ರಾಕೇಶ್‌ರವರು ಮಾತನಾಡಿ, ಆರ್.ವಿ. ಮಾತ್ರವಲ್ಲ ರೆಗ್ಯುಲರ್ ಫಲಿತಾಂಶ ಕೂಡ ಸಕಾಲದಲ್ಲಿ ಪ್ರಕಟವಾಗುತ್ತಿಲ್ಲ. ತುಂಬಾ ವಿಳಂಬವಾಗುತ್ತಿದೆ ಎಂದರು. ಶ್ರೀ ಉಲ್ಲಾಸ್ ಇ.ಜಿ. ರವರು ಮಾತನಾಡಿ ಪರೀಕ್ಷೆ ಮುಗಿದ ಬಹಳ ದಿನಗಳ ನಂತರ ಮೌಲ್ಯಮಾಪನ ಕಾರ್ಯವನ್ನು ಆರಂಭಿಸಲಾಗುತ್ತಿದೆ. ಮೌಲ್ಯಮಾಪನ ಮುಗಿದ ನಂತರವೂ ಫಲಿತಾಂಶ ಪ್ರಕಟಣೆಗೆ ವಿಳಂಬವಾಗುತ್ತಿದೆ. ಈ ಹಿಂದೆ ಮೌಲ್ಯಮಾಪನ ಮುಗಿದ ಒಂದು ಗಂಟೆಯೊಳಗೆ ಫಲಿತಾಂಶ ಪ್ರಕಟಿಸಿದ ದಾಖಲೆ ಕುವೆಂಪು ವಿಶ್ವವಿದ್ಯಾಲಯದಲ್ಲಿಯೇ ಇದೆ. ಆದುದರಿಂದ, ಪರೀಕ್ಷೆ ಆರಂಭವಾಗುವ ಸಮಯದಲ್ಲಿಯೇ ಮೌಲ್ಯಮಾಪನಕ್ಕೆ ವೇಳಾಪಟ್ಟಿ ಸೇರಿದಂತೆ ಎಲ್ಲಾ ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು ಎಂದರು. ಡಾ.ಎಂ. ವೆಂಕಟೇಶ್‌ರವರು ಮಾತನಾಡಿ, ಪರೀಕ್ಷಾ ಪ್ರಕಟಣೆಯನ್ನು ಸಾಕಷ್ಟು ಬೇಗನೇ ಪ್ರಕಟಿಸಿ, ಶುಲ್ಕ ಪಾವತಿಸಲು ಹೆಚ್ಚಿನ ಕಾಲಾವಕಾಶ ನೀಡಿ ಎಂದರು.

ಮಾನ್ಯ ಕುಲಪತಿಯವರು ಫಲಿತಾಂಶ ವಿಳಂಬದ ಕುರಿತು ಮಾತನಾಡಿ, ಇದು ನಮ್ಮ ವ್ಯವಸ್ಥೆಯಲ್ಲಿಯೇ ಸಮಸ್ಯೆ ಇರುವುದರಿಂದ ಈ ರೀತಿಯಾಗುತ್ತಿದೆ. ಈ ಬಗ್ಗೆ ಸಮಗ್ರವಾಗಿ ಪರಿಶೀಲಿಸಿ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

ಸೂಕ್ತ ಕ್ರಮವಹಿಸುವುದಾಗಿ ತಿಳಿಸಿದರು. ಕುಲಸಚಿವ (ಮೌಲ್ಯಮಾಪನ)ರವರು ಬಿ.ಸಿ.ಎ. ಫಲಿತಾಂಶದ ಕುರಿತು ಮಾತನಾಡಿ, ಇದರ ಬಗ್ಗೆ ಕ್ರಮ ಕೈಗೊಳ್ಳಲಾಗಿದ್ದು, ಕಾಲೇಜುವಾರು ಪರಿಶೀಲಿಸಲಾಗುತ್ತಿದೆ ಎಂದರು.

**2025:ಎಸಿ–4.26(5):** **ಪ್ರೊ.ಕೇಶವ, ಹೆಚ್., ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ ಇವರು ಮಾತನಾಡಿ** ಕ್ರೀಡಾ ಚಟುವಟಿಕೆಗಳ ಕುರಿತಾಗಿ ದೈಹಿಕ ಶಿಕ್ಷಣ ನಿರ್ದೇಶಕರ ಸಂಘದವರು ಮನವಿ ಸಲ್ಲಿಸಿದ್ದಾರೆ. ಈ ಬಗ್ಗೆ ಸಕಾರಾತ್ಮಕ ಕ್ರಮ ಕೈಗೊಳ್ಳಿ ಎಂದರು.

ವಿಶ್ವವಿದ್ಯಾಲಯದ ದೈಹಿಕ ಶಿಕ್ಷಣ ನಿರ್ದೇಶಕರಾದ ಡಾ.ಎನ್.ಡಿ. ವಿರುಪಾಕ್ಷರವರು ಮಾತನಾಡಿ, ದೈಹಿಕ ಶಿಕ್ಷಣ ನಿರ್ದೇಶಕರ ಸಂಘದವರು ವಿಶ್ವವಿದ್ಯಾಲಯಕ್ಕೆ ಕೂಡ ಮನವಿ ಸಲ್ಲಿಸಿದ್ದಾರೆ. ಅವರು ಕ್ರೀಡಾ ಚಟುವಟಿಕೆಗಳನ್ನು ಬೇಗನೆ ಆರಂಭಿಸಬೇಕೆಂದು ಕೇಳುತ್ತಿದ್ದಾರೆ. ಆದರೆ, ವಿಶ್ವವಿದ್ಯಾಲಯದಲ್ಲಿ ಕ್ರೀಡಾ ಚಟುವಟಿಕೆಗಳನ್ನು ಆರಂಭಿಸಲು ಅಸೋಸಿಯೇಷನ್ ಆಫ್ ಇಂಡಿಯನ್ ಯೂನಿವರ್ಸಿಟೀಸ್, ನವದಹೆಲಿ ಇವರಿಂದ Annual Calender of Events ಬರಬೇಕು. ಸ್ನಾತಕೋತ್ತರ ಪ್ರವೇಶಗಳು ಮುಗಿಯದೇ ಕ್ರೀಡೆಗಳನ್ನು ಆರಂಭಿಸಲು ತೊಂದರೆಯಾಗುತ್ತದೆ. ಸ್ನಾತಕೋತ್ತರ ಕೋರ್ಸ್‌ಗಳಿಗೆ ಉತ್ತಮ ಕ್ರೀಡಾಪಟುಗಳು ಪ್ರವೇಶ ಪಡೆದಲ್ಲಿ, ಅಂತರ ವಿಶ್ವವಿದ್ಯಾಲಯ ಕ್ರೀಡಾಕೂಟದಲ್ಲಿ ಭಾಗವಹಿಸಲು ವಿಶ್ವವಿದ್ಯಾಲಯದ ಒಳ್ಳೆಯ ತಂಡವನ್ನು ಆಯ್ಕೆ ಮಾಡಲು ಅನುಕೂಲವಾಗುತ್ತದೆ ಎಂದರು. ಮುಂದುವರೆದು ಮಾತನಾಡಿದ ಅವರು, ಅಂತರ ವಿಶ್ವವಿದ್ಯಾಲಯ ಪಂದ್ಯಾವಳಿಯಲ್ಲಿ ಭಾಗವಹಿಸುವ ತಂಡಗಳ ವೆಚ್ಚ ಭರಿಸಲು ಪ್ರತಿ ತಂಡಕ್ಕೂ ಪ್ರತ್ಯೇಕವಾಗಿ ಎ.ಸಿ. ಬಿಲ್ಲಿನಲ್ಲಿ ಮುಂಗಡ ಪಡೆಯಲಾಗುತ್ತಿದೆ. ಕ್ರೀಡಾಕೂಟದಲ್ಲಿ ಭಾಗವಹಿಸುವ ತಂಡಗಳ ಸಾಧನೆ ಉತ್ತಮವಾಗಿದ್ದಲ್ಲಿ, ಮುಂಗಡ ಪಡೆದಿದ್ದಕ್ಕಿಂತ ಹೆಚ್ಚಿನ ವೆಚ್ಚವಾಗುತ್ತಿದ್ದು, ತಂಡಗಳು ಕ್ರೀಡಾಕೂಟದಿಂದ ಬೇಗನೆ ನಿರ್ಗಮಿಸಿದರೆ ಕಡಿಮೆ ವೆಚ್ಚವಾಗುತ್ತದೆ. ಇದರಿಂದಾಗಿ ತಂಡಕ್ಕೆ ಇಷ್ಟೇ ವೆಚ್ಚವಾಗುತ್ತದೆ ಎಂದು ನಿಖರವಾಗಿ ಅಂದಾಜಿಸಲು ಸಾಧ್ಯವಾಗುವುದಿಲ್ಲ. ಆದುದರಿಂದ, ಪ್ರತಿ ತಂಡಕ್ಕೂ ಪ್ರತ್ಯೇಕವಾಗಿ ಎ.ಸಿ.ಬಿಲ್ಲಿನಲ್ಲಿ ಮುಂಗಡ ಪಡೆಯುವುದಕ್ಕಿಂತ ಒಂದು ನಿಗದಿತ ಮೊತ್ತದ ಹಣವನ್ನು ರೋಲಿಂಗ್ ಫಂಡ್ ಆಗಿ ನೀಡಿದಲ್ಲಿ, ತಂಡಗಳ ವೆಚ್ಚ ಭರಿಸಿದ ನಂತರ ಲೆಕ್ಕತೀರುವಳಿ ಮಾಡಲು ಅನುಕೂಲವಾಗುತ್ತದೆ ಎಂದರು.

ಅಂತಿಮವಾಗಿ ಸಭೆಗೆ ಆಗಮಿಸಿ ಸೂಕ್ತ ಸಲಹೆ, ಸಹಕಾರ ನೀಡಿದ ಎಲ್ಲಾ ಸದಸ್ಯರುಗಳಿಗೆ ಕುಲಸಚಿವರು ಹೃತ್ಪೂರ್ವಕವಾಗಿ ವಂದಿಸಿದ ನಂತರ ಸಭೆಯ ಕಲಾಪಗಳು ಮುಕ್ತಾಯವಾದವು.

ಕುಲಸಚಿವರು

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

ಸಹಿ/–
ಕುಲಪತಿಗಳು